NESARU TINGALOLE

MAY 2006
Rs. 5/-

# ನೇಸರು
## ತಿಂಗಳೋಲೆ

### ಮೈಸೂರು ಅಸೋಸಿಯೇಷನ್ ಮುಂಬೈ

**ಗಾನಯೋಗಿ ಪಂಡಿತ ಪಂಚಾಕ್ಷರ ಗವಾಯಿ ಸಂಗೀತೋತ್ಸವದ ವಿಶೇಷಾಂಕ**



**The Mysore Association, Bombay**

393, Bhaudaji Road, Matunga, Mumbai-400 019.
Phone : 2402 4647, 2403 7065 • Fax : 2401 0574
E-mail : karunadu@bom5.vsnl.net.in



## ಅಸೋಸಿಯೇಷನ್‌ನ ಶ್ರೀ ಮಹಾಗಣಪತಿಯ ಪ್ರತಿಷ್ಠಾಪನೆಯ ವಾರ್ಷಿಕೋತ್ಸವ

ಅಕ್ಷಯ ತದಿಗೆ ಶ್ರೀ ಗಣಪತಿ ಪ್ರತಿಷ್ಠಾಪನೆಯ ದಿನ. ಈ ವರ್ಷದ ಅಕ್ಷಯ ತದಿಗೆ ದಿನ ಗಣಪತಿಗೆ 11 ವರ್ಷ. ದಿನಾಂಕ 30-04-2006 ರಂದು ಅಸೋಸಿಯೇಷನ್‌ನಲ್ಲಿ ವಾರ್ಷಿಕೋತ್ಸವವನ್ನು ಶ್ರದ್ಧಾ, ಭಕ್ತಿ, ಸಂಭ್ರಮಗಳಿಂದ ಆಚರಿಸಲಾಯಿತು.

ಮುಂಜಾನೆ 10.00 ರಿಂದ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಗಣಪತಿಗೆ ಅಭಿಷೇಕ, ಪೂಜೆ,



ಪೂಜಾ ಕೈಂಕರ್ಯದಲ್ಲಿ ನಿರತರಾಗಿರುವ ಶ್ರೀನಿವಾಸ ದಂಪತಿಗಳು

ಗಣಹೋಮಗಳು ನಡೆದವು. ಸಂಸ್ಥೆಯ ಉಪಾಧ್ಯಕ್ಷರಾದ ಡಾ. ಎಚ್.ಎಸ್. ಶ್ರೀನಿವಾಸ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀಯವರು ಪೂಜೆಗೆ ಕುಳಿತಿದ್ದು ಸಮಾರಂಭವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಮಹಾ ಮಂಗಳಾರತಿ ನಂತರ



ನೆರೆದ ಭಕ್ತ ವೃಂದ

ಮಂತ್ರಪುಷ್ಪ, ಶ್ರೀ ಡಾ. ಮಂಜುನಾಥ ಬಳಗದವರಿಂದ ಕನ್ನಡ ಭಕ್ತಿಗೀತೆಗಳ ಸಾಮೂಹಿಕ ಗಾಯನ ನಡೆದು ಮಹಾಪ್ರಸಾದದ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಈ ಸಮಾರಂಭದಲ್ಲಿ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿ ಮತ್ತು ಲಲಿತ ದೊರೆಸ್ವಾಮಿಯವರು ಉಪಸ್ಥಿತರಿದ್ದುದು ಸಮಾರಂಭಕ್ಕೆ ಕಳೆಯನ್ನಿತ್ತಿತು.

ಸರ್ವಶ್ರೀ/ಶ್ರೀಮತಿಯವರಾದ ಎಂ.ಎ.ಎನ್. ಪ್ರಸಾದ್, ವೈಶಾಲಿ ಹಟ್ಟಂಗಡಿ, ಲಾವಣ್ಯ, ಎಚ್.ಎಸ್. ಅಶ್ವತ್ ನಾರಾಯಣ, ಸುರೇಶ ಡಿ. ಖಾಸನೀಸ್, ಎಸ್.ವಿ. ಅರಸು, ಜಿ.ಎಚ್. ರಂಗನಾಥ, ಎಸ್.ವಿ. ಮೋಹನ್, ಶಂಕರ ನಾರಾಯಣ, ಆರ್.ಎಸ್. ರಂಗನಾಥ, ಮಂಜು ದೇವಾಡಿಗ, ಎಲ್.ಎಮ್. ನಾಯುಡು, ಎ.ಕೆ. ದೇಸಾಯಿ, ಬಿ.ಎಸ್. ಸುರೇಶ, ಎಚ್.ಆರ್. ವಸಂತ್, ಶ್ರೀ ದೊರೆಸ್ವಾಮಿ, ಕು. ಕ್ಷಮಾ, ಕೃತ್ತಿಕಾ, ಕೆ.ಎನ್. ಕೀರ್ತಿ, ಉಮಾ ರಾವ್, ಶಾರದಾ ನಾರಾಯಣ ಸ್ವಾಮಿ, ಸಿ.ಆರ್. ವೆಂಕಟೇಶ್, ಉದಯ, ಜ್ಯೋತಿ, ಕೆ. ಮಂಜುನಾಥಯ್ಯ, ಡಾ. ಬಿ.ಆರ್. ಮಂಜುನಾಥ

ಇವರೆಲ್ಲರೂ ಸೇವಾಕರ್ತರಾಗಿ ಸಹಕರಿಸಿ ಸಮಾರಂಭದ ಯಶಸ್ಸಿಗೆ ಕಾರಣರಾದರೆಂದು ತಿಳಿಸಲು ಹರ್ಷಿಸುತ್ತೇವೆ.

---

**THE MYSORE ASSOCIATION, BOMBAY**

**Forth Coming Programmes**

ಮಂಗಳವಾರ, ದಿನಾಂಕ ೧೬.೦೫.೨೦೦೬

ಅಂಗಾರಕ ಸಂಕಷ್ಟಹರ

ಗಣಪತಿ ಪೂಜೆ

ಸಂಜೆ ೬.೦೦ಕ್ಕೆ

ವಿವರಗಳಿಗೆ ಅಸೋಸಿಯೇಷನ್‌ನಲ್ಲಿ ಸಂಪರ್ಕಿಸಿರಿ.

---

## MATRIMONIAL

**Wanted a Girl, Brahmin (Madhwa Preferred)**

Aged 25-27,

Height Above 5, 6″

For Qualified Working in Mumbai.

27 years

Height 5", 10″

Brahmin - Madhwa, Haritsa Gotra

Contact : 9321028325

Home : 0836 - 2351492 (Hubli)

---

### ಕವಿತೆ

ಸಾವು ಬಂದೀತೆಂದು
ಚಿಂತಿಸಿದೆ ನಾ.
'ನನಗೆ ಸಾವಿಲ್ಲ'
ನಸು ನಕ್ಕಿತು
ನನ್ನ ಕವಿತೆ !

- ಶೋಭಾ ಪ್ರಮೋದ್



**ಮೈಸೂರು ಅಸೋಸಿಯೇಷನ್, ಮುಂಬಯಿ** **ಕರ್ನಾಟಕ ಸಂಘ, ಮುಂಬಯಿ**

ಮತ್ತು

## ಗಾನಯೋಗಿ ಪಂಡಿತ ಪಂಚಾಕ್ಷರ ಗವಾಯಿ ಜಯಂತ್ಯುತ್ಸವ ಸಮಿತಿ, ಬೆಂಗಳೂರು

ಇವರ ಸಂಯುಕ್ತ ಆಶ್ರಯದಲ್ಲಿ



# ಗಾನಯೋಗಿ ಪಂಡಿತ ಪಂಚಾಕ್ಷರ ಗವಾಯಿ

# ಸಂಗೀತೋತ್ಸವ 2006

**ದಿನಾಂಕ : 6 ಮತ್ತು 7 ಮೇ 2006**

**ಸುಪ್ರಸಿದ್ಧ ಸಂಗೀತ ಕಲಾವಿದರಿಂದ ಹಿಂದೂಸ್ತಾನಿ ಶಾಸ್ತ್ರೀಯ ಮತ್ತು ವಚನ ಸಂಗೀತ ವಿಶೇಷ ಕಾರ್ಯಕ್ರಮ**

ಕಾರ್ಯಕ್ರಮ :-

**ದಿನಾಂಕ 06-05-2006 ಶನಿವಾರ, ಸಂಜೆ : 3.30**

| | | |
|---|---|---|
| ಸ್ಥಳ | : | ಮೈಸೂರು ಅಸೋಸಿಯೇಷನ್ ಸಭಾಗೃಹ, ಮಾತುಂಗ, ಮುಂಬೈ -400 019 |
| ಉದ್ಘಾಟನೆ | : | ಸನ್ಮಾನ್ಯ ಶ್ರೀ ಎಂ. ವಿ. ರಾಜಶೇಖರ್<br>ಯೋಜನಾ ರಾಜ್ಯ ಸಚಿವರು, ಭಾರತ ಸರ್ಕಾರ |
| ಸ್ಮರಣ ಸಂಚಿಕೆಯ ಬಿಡುಗಡೆ | : | ಸನ್ಮಾನ್ಯ ಶ್ರೀ ಬಸವರಾಜ ಹೊರಟ್ಟಿ<br>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕಾನೂನು, ಸಂಸದೀಯ ವ್ಯವಹಾರ ಮತ್ತು ಮಾನವ ಹಕ್ಕುಗಳ ಸಚಿವರು |
| ಉಪಸ್ಥಿತಿ | : | 1. ಶ್ರೀ ಗೊ.ರು. ಚೆನ್ನಬಸಪ್ಪ<br>ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು<br>2. ಶ್ರೀ ಎಂ. ಶ್ರೀನಿವಾಸ<br>ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು |
| ಅಧ್ಯಕ್ಷತೆ | : | ಶ್ರೀ ಎಸ್. ದೊರೆಸ್ವಾಮಿ,<br>ಅಧ್ಯಕ್ಷರು, ಮೈಸೂರು ಅಸೋಸಿಯೇಷನ್, ಮುಂಬೈ |



## ಸಮಾವೇಶ 1 ಸಂಜೆ : 4.30

ಗಾಯನ :

1. ಪಂ. ಶಿವಾನಂದ ಪಾಟೀಲ, ಮುಂಬೈ
2. ಪಂ. ಕುಮಾರ ಮರಡೂರ, ಧಾರವಾಡ

- ಚಹಾ ವಿರಾಮ -

3. ಪಂ. ಡಿ. ಕುಮಾರದಾಸ್, ಧಾರವಾಡ
4. ಪಂ. ಮುದ್ದುಮೋಹನ್, ಬೆಂಗಳೂರು

**ದಿನಾಂಕ 07-05-2006, ಭಾನುವಾರ, ಬೆಳಿಗ್ಗೆ : 10.00**

ಸ್ಥಳ : ಕರ್ನಾಟಕ ಸಂಘ ಮುಂಬೈ, ವಿಶ್ವೇಶ್ವರಯ್ಯ ಸ್ಮಾರಕ ಮಂದಿರ, ಮೊಗಲ್ ಲೇನ್, ಮಾಹಿಮ್, ಮುಂಬೈ -400 016.

## ಸಮಾವೇಶ 2

ಗಾಯನ :

1. ಪಂ. ಸೂಗೂರೇಶ ಅಸ್ಕಿಹಾಳ್, ರಾಯಚೂರು
2. ಪಂ. ಪರಮೇಶ್ವರ ಹೆಗಡೆ, ಬೆಂಗಳೂರು

- ಊಟದ ಬಿಡುವು -

## ಸಮಾವೇಶ 3

1. ಪಂ. ರವೀಂದ್ರನಾಥ ಹಂದಿಗನೂರ, ಗದಗ
2. ಪಂ. ಗಣಪತಿ ಭಟ್ಟ ಹಾಸಣಗಿ, ಉತ್ತರ ಕನ್ನಡ

## ಸಮಾರೋಪ - ಸಂಜೆ 4.30

ಮುಖ್ಯ ಅತಿಥಿ : ಸನ್ಮಾನ್ಯ ಶ್ರೀ ಸಿ. ಎಂ. ಉದಾಸಿ,
ಗ್ರಾಮೀಣಾಭಿವೃದ್ಧಿ ಸಚಿವರು, ಕರ್ನಾಟಕ ಸರಕಾರ

ಉಪಸ್ಥಿತಿ : ಶ್ರೀ ಗೊ.ರು. ಚೆನ್ನಬಸಪ್ಪ,
ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು

ಅಧ್ಯಕ್ಷತೆ : ಶ್ರೀ ಎಂ. ಎಂ. ಕೋರಿ
ಅಧ್ಯಕ್ಷರು, ಕರ್ನಾಟಕ ಸಂಘ, ಮುಂಬೈ

## ಮಂಗಳ ಸಮಾವೇಶ

ಗಾಯನ : ಪಂಡಿತೆ. ಸಂಗೀತ (ಕಟ್ಟಿ) ಕುಲಕರ್ಣಿ

ಹಾರ್ಮೋನಿಯಂ : ಹೇಮಂತ್ ಹೆಮ್ಮಾಡಿ, ನಿರಂಜನ್ ಲೇಲೆ, ಪ್ರಕಾಶ್ ವಾಗಳ್

ತಬಲಾ : ಪಂ. ಗಣೇಶ ಹೆಗಡೆ

---

ಸಂಯೋಜಕರು : ಕೆ.ವಿ. ನಾಗರಾಜಮೂರ್ತಿ, ಭಾರತ ಯಾತ್ರಾ ಕೇಂದ್ರ, ಬೆಂಗಳೂರು

ಪ್ರಾಯೋಜನೆ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು

ಪ್ರಯೋಗ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು
ಭಾರತ ಯಾತ್ರಾ ಕೇಂದ್ರ, ಬೆಂಗಳೂರು

ಪ್ರಸಾರ ಹೊಣೆ : ಕರ್ನಾಟಕ ಸೋಪ್ಸ್ ಆಂಡ್ ಡಿಟರ್ಜಂಟ್ಸ್ ಲಿಮಿಟೆಡ್, ಬೆಂಗಳೂರು



# ಗಾನಯೋಗಿ ಪಂಚಾಕ್ಷರ ಗವಾಯಿ ಸಂಗೀತೋತ್ಸವ ಮೇ 6 ಮತ್ತು 7, 2006

ಹಿಂದೂಸ್ತಾನಿ ಸಂಗೀತದ ದಿಗ್ಗಜರುಗಳಾದ ಗಂಗೂಬಾಯಿ ಹಾನಗಲ್, ಭೀಮ ಸೇನ ಜೋಷಿ ಹಾಗೂ ಸ್ವರ್ಗಸ್ಥರಾದ ಕುಮಾರ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ್ ಮತ್ತು ಬಸವರಾಜ ರಾಜಗುರು ಇವರುಗಳಲ್ಲಿ ಸಾಮ್ಯತೆ ಏನಿದೆ?

ಇವರೆಲ್ಲ ಪದ್ಮ ಪ್ರಶಸ್ತಿ ಮತ್ತು ಪ್ರತಿಷ್ಠಿತ ತಾನ್‌ಸೇನ್ ಪ್ರಶಸ್ತಿಗಳನ್ನು ಗಳಿಸಿರುವುದಲ್ಲದೆ, ಕರ್ನಾಟಕ ರಾಜ್ಯದ ಸಣ್ಣ ಜಿಲ್ಲೆಯಾದ ಧಾರವಾಡಕ್ಕೆ ಸೇರಿದವರು. ಉತ್ತರ ಕರ್ನಾಟಕದಲ್ಲಿ ಹಿಂದುಸ್ತಾನಿ ಸಂಗೀತವನ್ನು ಜನಪ್ರಿಯಗೊಳಿಸುವವರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವರೆಂದರೆ ಸ್ವರ್ಗೀಯರಾದ ಪಂ. ನೀಲಕಂಠ ಬುವಾ ಮಿರಜಕರ್ ಮತ್ತು ಉಭಯಗಾನ ವಿಶಾರದ ಪಂಚಾಕ್ಷರ ಗವಾಯಿಗಳು. ಪಂಚಾಕ್ಷರ ಗವಾಯಿಗಳು ದೃಷ್ಟಿಹೀನರಾಗಿದ್ದರೂ, ಕಳೆದ ಶತಮಾನದಲ್ಲಿ ಬಾಂಬೆ ಪ್ರೆಸಿಡೆನ್ಸಿ ಮತ್ತು ಮೈಸೂರು ಸಂಸ್ಥಾನದಲ್ಲಿ ಸಂಗೀತ ಕ್ಷೇತ್ರದಲ್ಲಿ ಅವರು ಮಾಡಿದ ದೂರ ದೃಷ್ಟಿಯುತ ಕೆಲಸ ಅಸಮಾನ್ಯವಾದುದು.

ಗವಾಯಿಗಳು ದೃಷ್ಟಿಹೀನರಾಗಿದ್ದರೂ ಸಹ ಶಾಸ್ತ್ರೀಯ ಸಂಗೀತವನ್ನು ಮುಂತರುವುದಲ್ಲಿ ಅವರಿಗಿದ್ದ ಅಂತರ್‌ದೃಷ್ಟಿ ಹಾಗೂ ದೂರದೃಷ್ಟಿ ಗುರುತರವಾದುದು. ಕರ್ನಾಟಕ ಹಾಗೂ ಹಿಂದೂಸ್ತಾನಿ ಶೈಲಿಯ ಗಾಯನದಲ್ಲಿ ಪಾಂಡಿತ್ಯವಿದ್ದುದಲ್ಲದೆ, ಹಲವಾರು ವಾದ್ಯಗಳ ನುಡಿಸುವಿಕೆಯಲ್ಲಿ ಗವಾಯಿಗಳು ಪ್ರಾವೀಣ್ಯತೆಯನ್ನು ಪಡೆದಿದ್ದರು. ಇವರು 1943ನೇ ಇಸವಿಯಲ್ಲಿ ಗದಗದಲ್ಲಿ ಸ್ಥಾಪಿಸಿದ "ವೀರೇಶ್ವರ ಪುಣ್ಯಾಶ್ರಮ"ದಲ್ಲಿ ಸಾವಿರಾರು ಉದಯೋನ್ಮುಖಿ ಕಲಾವಿದರು ಜೀವನದ ವಿವಿಧ ಕ್ಷೇತ್ರಗಳಲ್ಲಿ ಗುರುಕುಲ ರೀತಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಗವಾಯಿಗಳ ಹಲವಾರು ದೃಷ್ಟಿಹೀನ ಶಿಷ್ಯರು ಸಂಗೀತ ಶಿಕ್ಷಕರಾಗಿ ಕರ್ನಾಟಕದಲ್ಲಿ ಖ್ಯಾತಿ ಗಳಿಸಿದ್ದಾರೆ. ಈಗ ತೊಂಬತ್ತರ ಹರೆಯದಲ್ಲಿರುವ, ಗವಾಯಿಗಳ ಅತ್ಯಂತ ಹಿರಿಯ ಶಿಷ್ಯರಾದ ಪಂ. ಪುಟ್ಟರಾಜ ಗವಾಯಿಗಳು ಈ ಆಶ್ರಮದ ಪ್ರಧಾನಚಾರ್ಯ ರಾಗಿರುತ್ತಾರೆ.

ಮುಂಬಯಿಯ ಸಂಗೀತ ಪ್ರೇಮಿಗಳಿಗೆ ಹಿಂದೂಸ್ತಾನಿ ಸಂಗೀತದ ರಸದೌತಣವನ್ನು ಸವಿಯು ಸದವಕಾಶವನ್ನು, ಕಿಂಗ್ಸ್ ಸರ್ಕಲ್‌ನಲ್ಲಿರುವ ಮೈಸೂರು ಅಸೋಸಿಯೇಷನ್ ಮತ್ತು ಮಾಟುಂಗ ಪಶ್ಚಿಮದಲ್ಲಿರುವ ಕರ್ನಾಟಕ ಸಂಘಗಳು ಬೆಂಗಳೂರಿನ ಗಾನಯೋಗಿ ಪಂಚಾಕ್ಷರ ಗವಾಯಿ ಜಯಂತ್ಯುತ್ಸವ ಸಮಿತಿಯೊಡ ಗೂಡಿ, ತಂತಮ್ಮ ಹವಾನಿಯಂತ್ರಿತ ಸಭಾಗೃಹಗಳಲ್ಲಿ ಮಾಡಿ ಕೊಡಲಿವೆ.

ಪಂ. ಗಣಪತಿ ಭಟ್, ಪರಮೇಶ್ವರ ಹೆಗ್ಡೆ, ಶಿವಾನಂದ ಪಾಟೀಲ್, ಸಂಗೀತಾ ಕಟ್ಟಿ, ಕುಮಾರದಾಸ್ ಮೊದಲಾದ 9 ಪ್ರತಿಷ್ಠಿತ ಗಾಯಕರು, ಗಾನಯೋಗಿ ಪಂಚಾಕ್ಷರ ಗವಾಯಿಗಳ ನೆನಪಿಗೆ ಸಮರ್ಪಿಸಲಾಗಿರುವ ಸಂಗೀತೋತ್ಸವದಲ್ಲಿ ಭಾಗವಹಿಸಲಿದ್ದಾರೆ.

ಈ ಉತ್ಸವ ಶನಿವಾರ ದಿನಾಂಕ 6-5-2006 ರಂದು 3.30 ಮಧ್ಯಾಹ್ನ ಗಂಟೆಗೆ ಮೈಸೂರು ಅಸೋಸಿಯೇಷನ್ನಿನಲ್ಲಿ ಪ್ರಾರಂಭಗೊಂಡು ಮರುದಿನ ಬೆಳಿಗ್ಗೆ 10.00 ಗಂಟೆಗೆ ಕರ್ನಾಟಕ ಸಂಘದಲ್ಲಿ ಮುಂದುವರಿಯುತ್ತದೆ.

## ಸಂಗೀತೋತ್ಸವದಲ್ಲಿ ಭಾಗವಹಿಸುವ ಕಲಾವಿದರ ಕಿರು ಪರಿಚಯ

**ಶನಿವಾರ ಮೇ ೦೬, ೨೦೦೬ರಂದು ಮೈಸೂರು ಅಸೋಸಿಯೇಷನ್ ಸಭಾಗೃಹದಲ್ಲಿ**

**೧. ಪಂ. ಶಿವಾನಂದ ಪಾಟೀಲ್:**

ಕನ್ನಡ ನಾಟಕ ಕಂಪನಿಯಲ್ಲಿ ಹುಟ್ಟಿದ ಶಿವಾನಂದ ಪಾಟೀಲರು ಇಂದು ಹಿಂದೂಸ್ತಾನಿ ಸಂಗೀತದ ಖ್ಯಾತ ಗಾಯಕರಾಗಿದ್ದಾರೆ. ಪಂ. ಪಂಚಾಕ್ಷರ ಗವಾಯಿಗಳ ನೇರ ಶಿಷ್ಯ ಪಂ. ಬಸವರಾಜ ರಾಜಗುರುಗಳಲ್ಲಿ ಕಲಿತು ಅನಂತರ ಪಂ. ಕಾಣೇ ಬುವಾ, ಪಂ. ಜಿತೇಂದ್ರ ಅಭಿಶೇಕಿ ಮತ್ತು ಪಂ. ಯಶವಂತ ಬುವಾ ಜೋಷಿ ಅವರಲ್ಲಿ ಶಿಷ್ಯ ವೃತ್ತಿ ಮಾಡಿದ್ದಾರೆ. ಇಂದು ಅವರು ಕನ್ನಡ ಹಾಗೂ ಮರಾಠಿ ಸಂಗೀತ ನಾಟಕಗಳಲ್ಲಿ ನಟರಾಗಿಯೂ ಖ್ಯಾತಿ ಗಳಿಸಿದ್ದಾರೆ.

**೨. ಪಂ. ಕುಮಾರ ಮರ್ದೂರ್, ಧಾರವಾಡ :**

ಪಂ. ಸೋಮನಾಥ ಮರ್ದೂರರ ಮಗನಾದ ಕುಮಾರ ಮರ್ದೂರ್ ತಮ್ಮ ಚಿಕ್ಕಂದಿನಿಂದಲೇ ತಮ್ಮ ಪ್ರತಿಭೆಯಿಂದ ಬೆಳಗಿದವರು. ೨೮ರ ಹರೆಯದ ಈ ಯುವ ಗಾಯಕ ಈಗಾಗಲೇ ಮಹಾರಾಷ್ಟ್ರದಲ್ಲಿ ಖ್ಯಾತಿ ಗಳಿಸಿದ್ದಾರೆ.

**೩. ಪಂ. ಮುದ್ದು ಮೋಹನ್:**

ಕರ್ನಾಟಕ ಅಡ್‌ಮಿನಿಸ್ಟ್ರೇಟಿವ್ ಸರ್ವಿಸಸ್ (ಕೆ.ಎ.ಎಸ್) ಶ್ರೇಣಿಗೆ ಸೇರಿದ ಹಾಗೂ ಇಂದಿನ ಕರ್ನಾಟಕ ಸರ್ಕಾರದ ಉನ್ನತ ಹುದ್ದೆಯಲ್ಲಿರುವ ಪಂ. ಮುದ್ದು ಮೋಹನ್ ಅವರ ಹವ್ಯಾಸ ಹಿಂದೂಸ್ತಾನಿ ಸಂಗೀತ. ಪಂ. ಪಂಚಾಕ್ಷರ ಗವಾಯಿಗಳ ನೇರ ಶಿಷ್ಯ ಪಂ. ಬಸವರಾಜ ರಾಜಗುರುಗಳಿಂದ ಹಿಂದೂಸ್ತಾನಿ ಸಂಗೀತ ಕಲಿತಿರುವ ಈ ಗಾಯಕರು ವಚನ ಸಂಗೀತ ಅದರಲ್ಲಿಯೂ ಶಿಶುನಾಳ ಶರೀಫರ ವಚನಗಳ ಗಾಯನದಲ್ಲಿ ಹೆಸರು ಗಳಿಸಿದ್ದಾರೆ.

**೪. ಪಂ. ಕುಮಾರ ದಾಸ್:**

ದೈವದತ್ತ ಶ್ರೀಮಂತ ಕಂಠಶ್ರೀಯನ್ನು ಪಡೆದಿರುವ ಪಂ. ಕುಮಾರ ದಾಸರು ಪಂ. ಪಂಚಾಕ್ಷರ ಗವಾಯಿಗಳು ಗದಗದಲ್ಲಿ ಸ್ಥಾಪಿಸಿರುವ ವೀರೇಶ್ವರ ಪುಣ್ಯಾಶ್ರಮದಲ್ಲಿಯೇ ಇದ್ದು ಗುರು ಶಿಷ್ಯ ಪರಂಪರೆಯಲ್ಲಿ ಸಂಗೀತಾಭ್ಯಾಸ ಮಾಡಿ ಪಂಚಾಕ್ಷರಿ ಗವಾಯಿಗಳ ಹಾಗೂ ಪುಟ್ಟ ರಾಜಗವಾಯಿಗಳ ನೇರ ಶಿಷ್ಯರಾಗಿದ್ದಾರೆ. ಅಷ್ಟೇ ಅಲ್ಲ ಇಂದಿನ ಪೀಳಿಗೆಯ ಧಾರವಾಡ ಪರಂಪರೆಯ ಉತ್ತಮ ಗಾಯಕರಾಗಿದ್ದಾರೆ.

**ರವಿವಾರ, ಮೇ ೦೭, ೨೦೦೬ರಂದು ಕರ್ನಾಟಕ ಸಂಘ ಸಭಾಗೃಹದಲ್ಲಿ**

**೧. ಪಂ. ಸುಗುರೇಶ ಅಸ್ಕಿಹಾಳ್:**

ವೀರೇಶ್ವರ ಪುಣ್ಯಾಶ್ರಮದ ಸಂಗೀತಚಾರ್ಯರಾದ ಕರ್ನಾಟಕ ಹಿಂದೂಸ್ತಾನಿ ಸಂಗೀತಗಳೆರಡರಲ್ಲಿಯೂ ವಿದ್ವಾಂಸರಾದ ಪಂ. ಪುಟ್ಟರಾಜ ಗವಾಯಿಗಳಿಂದ ಗ್ವಾಲಿಯರ್ ಕಿರಣಾ ಘರಾಣೆಗಳಲ್ಲಿ ಪರಿಣಿತಿ ಪಡೆದಿರುವ ಹಾಗೂ ಇಂದಿನ ಪೀಳಿಗೆಯ ಪ್ರತಿಭಾವಂತ ಗಾಯಕರಾದ ಸುಗೂರೇಶರ ಹೆಸರು ಮಹಾರಾಷ್ಟ್ರ ದಲ್ಲಿನ್ನೂ ಅಷ್ಟಾಗಿ ತಿಳಿದಿಲ್ಲವೆಂಬುದೇ ಇವರನ್ನು ಕೇಳುವವರಲ್ಲಿ ಆಸಕ್ತಿ ಮೂಡಿಸುತ್ತದೆ.

**೨. ಪಂ. ಪರಮೇಶ್ವರ ಹೆಗ್ಡೆ :**

ಉತ್ತರ ಕರ್ನಾಟಕದವರಾದ ಪಂ. ಪರಮೇಶ್ವರ ಹೆಗ್ಡೆಯವರು ಪಂ. ಚಂದ್ರಶೇಖರ ಪುರಾಣಿಕ್ ಹಾಗೂ ಪಂ. ಬಸವರಾಜ ರಾಜಗುರುಗಳಲ್ಲಿ ಶಿಷ್ಯವೃತ್ತಿ ಮಾಡಿದ್ದಾರೆ. ದೈವದತ್ತ ಸುದೃಢ ಕಂಠಶ್ರೀ ಪಡೆದಿರುವ ಪರಮೇಶ್ವರ ಹೆಗ್ಡೆಯವರು ಪಂ. ಚಂದ್ರಶೇಖರ ಪುರಾಣಿಕ್ ಹಾಗೂ ಪಂ. ಬಸವರಾಜ ರಾಜಗುರುಗಳಲ್ಲಿ ಶಿಷ್ಯವೃತ್ತಿ ಮಾಡಿದ್ದಾರೆ. ದೈವದತ್ತ ಸುದೃಢ ಕಂಠಶ್ರೀ ಪಡೆದಿರುವ ಪರಮೇಶ್ವರ ಹೆಗ್ಡೆ ೩ ಗತಿಗಳಲ್ಲಿಯೂ ಸುಲಭವಾಗಿ ಹಾಡಿ ರಸಿಕರನ್ನು ರಂಜಿಸಬಲ್ಲ, ಈಗಾಗಲೇ ಕರ್ನಾಟಕ ಮಹಾರಾಷ್ಟ್ರಗಳೆರಡರಲ್ಲೂ ಹೆಸರು ಗಳಿಸಿರುವ ಶ್ರೇಷ್ಠ ಕಲಾವಿದರಾಗಿದ್ದಾರೆ.

**೩. ಪಂ. ರವೀಂದ್ರನಾಥ ಹಂದಿಗನೂರ್:**


ಪಂ. ಪಂಚಾಕ್ಷರಿ ಗವಾಯಿಗಳಿಂದ ಸ್ಥಾಪಿಸಲ್ಪಟ್ಟ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿಯೇ ನೇರವಾಗಿ ಪಂ. ಪುಟ್ಟರಾಜ ಗವಾಯಿಗಳಿಂದ ಸಂಗೀತವನ್ನು ಕಲಿತಿರುವ ರವೀಂದ್ರನಾಥರು ಈಗಾಗಲೇ ಕರ್ನಾಟಕದಲ್ಲಿ ಒಳ್ಳೆಯ ಹೆಸರು ಮಾಡಿದ್ದಾರೆ. ವೀರೇಶ್ವರ ಪುಣ್ಯಾಶ್ರಮ ದಲ್ಲಿ ಈಗ ಇವರು ಸಂಗೀತ ಕಲಿಸುವ ಕಾಯಕವನ್ನು ಮಾಡುತ್ತಿದ್ದಾರೆ.

**೪. ಪಂ. ಗಣಪತಿ ಭಟ್ ಹಸಣಗಿ :**

ಇಂದಿನ ಕರ್ನಾಟಕದ ಪರಂಪರೆಯ ಖ್ಯಾತ ಸಂಗೀತಗಾರರಾದ ಇವರು ಪಂ. ಬಸವರಾಜ ರಾಜಗುರುಗಳ ನೇರ ಶಿಷ್ಯರು. ಅನಂತರ ಇವರು ಮುಂಬೈನ ಪಂ. ಸಿ.ಆರ್. ವ್ಯಾಸ್ ಅವರಲ್ಲಿಯೂ ಸಂಗೀತಾಭ್ಯಾಸ ಮಾಡಿದ್ದಾರೆ. ಅಖಿಲ ಭಾರತ ನೆಲೆಯಲ್ಲಿ ಖ್ಯಾತಿ ಪಡೆದಿರುವ ಕಲಾವಿದರು ಮುಂಬೈ ಸಂಗೀತಾಸಕ್ತರಿಗೂ ಸುಪರಿಚಿತರು.

**೫. ಪಂ. ಸಂಗೀತಾ ಕುಲಕರ್ಣಿ ನಿ. ಕಟ್ಟಿ:**

ಬೆಳ್ಳಿ ತೆರೆಯ ಹಿಂದಿನ ಹಾಡುಗಾರ್ತಿಯಾಗಿ ಮತ್ತು ಸಂಗೀತ ನಾಟಕಗಳ ನಟಿಯಾಗಿ ಅತಿ ಹೆಚ್ಚು ಬೇಡಿಕೆಯಿರುವ ಈ ಕಲಾವಿದೆ ಪಂ. ಬಸವರಾಜ ಗುರುಗಳ ನೇರ ಶಿಷ್ಯೆ. ಕರ್ನಾಟಕದಲ್ಲಿ ಹಾಗೂ ಮಹಾರಾಷ್ಟ್ರದಲ್ಲಿ ಈಗಾಗಲೇ ಹೆಸರು ಮಾಡಿರುವ ಕಲಾವಿದೆ. ಬೆಂಗಳೂರಿನ ಭಾರತೀಯ ವಿದ್ಯಾಭವನದ ಸಂಗೀತ ಶಾಲೆಯಲ್ಲಿ ಗುರುಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.



# ಪಂಚಾಕ್ಷರಿ ಗವಾಯಿಗಳು

ಆರ್.ವಿ. ಶೇಷಾದ್ರಿಗವಾಯಿ

ಹಾನಗಲ್ ತಾಲ್ಲೂಕಿನ ಕಾಡಶೆಟ್ಟಿ ಹಳ್ಳಿಯಲ್ಲಿ ಹುಟ್ಟಿನೊಂದಿಗೆ (ಜನನ: ಫೆಬ್ರವರಿ ೨, ೧೮೯೨), ಅಂಧತ್ವವನ್ನು ಪಡೆದಿದ್ದ ಗದಿಗೆಯ್ಯ ಎಂಬ ಬಾಲಕನು ಪಂಚಾಕ್ಷರಿ ಗವಾಯಿಯಾಗಿ ಮಾರ್ಪಟ್ಟಿದ್ದು ಅವಿರತ ಹೋರಾಟದ, ಮಹತ್ತರವಾದುದನ್ನು ಸಾಧಿಸಬೇಕೆಂಬ ದೃಢ ಸಂಕಲ್ಪದ, ಸಾಹಸ, ತ್ಯಾಗ, ಕಷ್ಟ ಕಾರ್ಪಣ್ಯಗಳ ಒಂದು ರಂಜನೀಯ ಕತೆಯಾಗಿದೆ. ಈ ಸುದೀರ್ಘ ಹೋರಾಟದ ಪ್ರಕ್ರಿಯೆಯಲ್ಲಿ ವಿಧಿ ಎಸೆದಿದ್ದ ಕ್ಲಿಷ್ಟ ಸವಾಲುಗಳನ್ನು, ಪಂಥಾಹ್ವಾನಗಳನ್ನು ಎದುರಿಸುತ್ತ, ದಿಟ್ಟತನದಿಂದ, ಆತ್ಮವಿಶ್ವಾಸದಿಂದ ಮುನ್ನಡೆದ ಪಂಚಾಕ್ಷರ ಗವಾಯಿಗಳ ಜೀವನ ಒಂದು ಮಹತ್ವದ ಮಜಲಾಗಿದೆ. ಅಪೇಕ್ಷಿತ ರೀತಿಯಲ್ಲಿ ಸಾಮಾಜಿಕ ಪರಿವರ್ತನೆಯನ್ನುಂಟು ಮಾಡುವ ರೀತಿಯಲ್ಲಿ, ತಲೆಮಾರುಗಳುದ್ದಕ್ಕೂ ನೆಲೆನಿಲ್ಲಬಲ್ಲ ಕೊಡುಗೆಗಳನ್ನು ನೀಡುವ ವ್ಯಕ್ತಿ ಚಾರಿತ್ರಿಕ ವ್ಯಕ್ತಿ ಎನಿಸುತ್ತಾನೆ. ಕುರುಡರ ಜೀವನದಲ್ಲಿ ಅದರಲ್ಲಿಯೂ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ನಮ್ಮ ಸಮಾಜದಲ್ಲಿ ಪಂಚಾಕ್ಷರ ಗವಾಯಿಗಳು ನೀಡಿದ ವಿಶಿಷ್ಟ ಕೊಡುಗೆಗಳು ಅಂಧರ ಜೀವನದಲ್ಲಿ ಹೊಸ ಬೆಳಕನ್ನು ತಂದಿವೆ. ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿ, ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದೆಂಬ ಆಶಾವಾದವನ್ನು ಸ್ಫುರಿಸಿವೆ. ಇಂದು ಅಖಿಲ ಭಾರತದ ಖ್ಯಾತಿಯ ಸಾಂಸ್ಕೃತಿಕ ಕೇಂದ್ರವಾಗಿರುವ ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮವು ಈ ಏಕವ್ಯಕ್ತಿಯ ಚಿರಸ್ಮರಣೆಯ ಸಾಧನೆಯಾಗಿದ್ದು, ಅಂಧತ್ವಕ್ಕೇನೆ ಅಂಧತ್ವವನ್ನುಂಟು ಮಾಡಿ, ಮಾನವ ಸಾಧನೆಯು ಎಂತಹ ವಿಕಲತೆಯನ್ನೂ ಮೀರಿ ಮುನ್ನಡೆಯಬಲ್ಲದು ಎಂಬುದನ್ನು ಸ್ಥಿರೀಕರಿಸಿದೆ. ಮಾನವ ಇತಿಹಾಸದುದ್ದಕ್ಕೂ ಸಾಮ್ರಾಜ್ಯಗಳನ್ನು ಕಟ್ಟಿ ಬೆಳೆಸಿದ ಚಾರಿತ್ರಿಕ ಪುರುಷರ ಸಾಧನೆಗಳಿಗಿಂತ ಅದಮ್ಯವಾದ, ರೋಮಾಂಚನಕಾರಿಯಾದ ಈ ಸಾಧನೆ, ಎಂದೂ ಅಳಿಸಲಾರದ ಪಂಥವನ್ನು ಬೆಳೆಸಿದ ಹಾಗೂ ಬೆಳೆಸಬಲ್ಲ ಮೂಲವಾಗಿದೆ. ನದಿಗಳಂತೆ ನಿರಂತರವಾಗಿ ದಯಪಾಲಿಸಿ, ತಾವು ಇಲ್ಲವಾದರೂ, ಚೈತನ್ಯ ಸ್ವರೂಪಿಯಾಗಿ, ಪ್ರೇರಕ ಶಕ್ತಿಯಾಗಿ, ನಿತ್ಯನೂತನವಾಗಿ ಜನಮನವನ್ನು ಮಾರ್ಗದರ್ಶಿಸುತ್ತಿರುವ ಪಂಚಾಕ್ಷರಿ ಗವಾಯಿಗಳು ನಮ್ಮ ನಾಡಿನ, ರಾಷ್ಟ್ರದ ಕಣ್ಮಣಿಯಾಗಿದ್ದವರು.

ದಕ್ಷಿಣಾದಿ ಮತ್ತು ಹಿಂದುಸ್ತಾನಿ ಸಂಗೀತಗಳಲ್ಲಿ ಪರಿಣತಿಯನ್ನು ಸಾಧಿಸಿದ ಈ ಗಾನಯೋಗಿ ಉಭಯಗಾನ ವಿಶಾರದರೆಂಬ ಖ್ಯಾತಿಯನ್ನು ಪಡೆದಿದ್ದವರು.

ಸಂಗೀತಾಭ್ಯಾಸದಲ್ಲಿ ಹೆಚ್ಚಿನ ಆಸಕ್ತಿವಹಿಸಿದ್ದ ಗುರುಬಸವ ಹಾಗೂ ಗದಿಗೆಯ್ಯನವರನ್ನು ಹೆಚ್ಚಿನ ಅಭ್ಯಾಸಕ್ಕಾಗಿ ಮೈಸೂರಿಗೆ ಕಳುಹಿಸಿಕೊಡಲು ಶ್ರೀ ಕುಮಾರಸ್ವಾಮಿಗಳು ತೀರ್ಮಾನಿಸಿದರು. ತನ್ಮಧ್ಯೆ ಗುರುಬಸವ ಕಾಲರಾ ಬೇನೆಗೆ ತುತ್ತಾಗಿ ಅಕಾಲಿಕವಾಗಿ ತೀರಿಹೋದಾಗ ಗದಿಗೆಯ್ಯನಿಗೆ ಆಘಾತವಾಯಿತು. ಸೋದರನ ಅಗಲುವಿಕೆಯಿಂದ ಆತನನ್ನು ಸಂತೈಸಿ, ಜೀವನದ ಗುರಿ ಸಫಲತೆಯತ್ತ ಆತನ ಮನಸ್ಸನ್ನು ಹರಿಸಿದರು. ಸಂಗೀತವನ್ನು ಕಲಿಯಬಯಸಿದ್ದ ಇತರ ಈರ್ವರು ವಿದ್ಯಾರ್ಥಿಗಳೊಂದಿಗೆ ಗದಿಗೆಯ್ಯನನ್ನು ಮೈಸೂರಿಗೆ ಕಳುಹಿಸಿಕೊಟ್ಟರು. ಮೈಸೂರಿನ ಕುರುಡರ ಶಾಲೆಯಲ್ಲಿ ಪ್ರವೇಶವನ್ನು ಪಡೆದ ಗದಿಗೆಯ್ಯ ಪಿಟೀಲು ವಿದ್ವಾಂಸ ವೆಂಕಟರಮಣಯ್ಯನವರ ಅಚ್ಚುಮೆಚ್ಚಿನ ಶಿಷ್ಯರಾಗಿ ಕೇವಲ ನಾಲ್ಕೇ ತಿಂಗಳ ಅವಧಿಯಲ್ಲಿ ಆ ಶಾಲೆಯಲ್ಲಿ ಎಲ್ಲರಿಗಿಂತ ಮೊದಲಿಗನಾದನು. ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡುವ ತವಕ, ಆಕಾಂಕ್ಷೆಯನ್ನು ಹೊಂದಿದ್ದ ಗದಿಗಯ್ಯ ಮೈಸೂರಿನಲ್ಲಿಯ ಹೆಸರಾಂತ ಸಂಗೀತ ವಿದ್ವಾಂಸರ ಪರಿಚಯವನ್ನು ಪಡೆದುಕೊಂಡನು. ಮೈಸೂರನ್ನು ಬಿಟ್ಟು ಹೊರಡುವಾಗ ಶ್ರೀ ಗೌರಿಶಂಕರ ಸ್ವಾಮಿಗಳು ಗದಿಗೆಯ್ಯನಿಗೆ ಪಂಚಾಕ್ಷರಿ ಎಂದು ನಾಮಕರಣ ಮಾಡಿ ಆಶೀರ್ವದಿಸಿದರು.

೧೯೦೮ರ ಡಿಸೆಂಬರ್ ತಿಂಗಳಿನ ೨೮ರಿಂದ ೩೦ರವರೆಗೆ ಜರುಗಿದ ಅಖಿಲ ಭಾರತ ವೀರಶೈವ ಮಹಾಸಭೆಯ ನಾಲ್ಕನೆಯ ಅಧಿವೇಶನದಲ್ಲಿ ಗದಿಗೆಯ್ಯ ತಮ್ಮ ಪಾಂಡಿತ್ಯಪೂರ್ಣ ಗಾಯನದಿಂದ ಅಸಂಖ್ಯ ಶ್ರೋತೃಗಳನ್ನು ರಂಜಿಸಿದರು. ಅಂದಿನಿಂದ ಗದಿಗೆಯ್ಯ ಪಂಚಾಕ್ಷರಿ ಗವಾಯಿಗಳಾದರು. ತಮ್ಮ ಕಂದ, ಶಿಷ್ಯನಾಗಿದ್ದ ಗದಿಗೆಯ್ಯನ ಸಾಧನೆಯನ್ನು ಕಂಡು ಕುಮಾರಸ್ವಾಮಿಗಳು ಸಂತಸಪಟ್ಟರು. ನಿನ್ನ ಪೂರ್ವ ಜನ್ಮದ ಸುಕೃತದಿಂದ ಈ ಗಾನವಿದ್ಯೆ ನಿನಗೆ ಲಭಿಸಿದೆ. ನಿಷ್ಠೆಯಿಂದ ಬ್ರಹ್ಮಚರ್ಯವನ್ನು ಪಾಲಿಸಿಕೊಂಡು, ಜಾತಿ-ಕುಲ ವ್ಯತ್ಯಾಸಗಳನ್ನು ಪರಿಗಣಿಸದೆ ಈ ವಿದ್ಯೆಯನ್ನು ಹೇಳಿಕೊಡು ಎಂಬುದಾಗಿ ಆದೇಶಿಸಿದರು. ಪಂಚಾಕ್ಷರಿ ಗವಾಯಿಗಳು ಗುರುಗಳ ಆಜ್ಞೆಯನ್ನು ತಮ್ಮ ಜೀವಿತದ ಅಂತ್ಯದವರೆಗೂ ಶಿರಸಾವಹಿಸಿ ಪಾಲಿಸಿದರು.

ಕರ್ನಾಟಕ ಅಥವಾ ದಕ್ಷಿಣಾದಿ ಸಂಗೀತವನ್ನು ಕರತಲಾಮಲಕ ಮಾಡಿಕೊಂಡಿದ್ದ ಪಂಚಾಕ್ಷರಿ ಗವಾಯಿಗಳು ಹಿಂದುಸ್ತಾನಿ ಸಂಗೀತವನ್ನು ಕಲಿಯುವಲ್ಲಿ ಆಸಕ್ತಿ ತೋರಿದರು. ಗ್ರಾಮಫೋನಿನಲ್ಲಿ ಗಾನಮುದ್ರಿಕೆಗಳನ್ನು ಆಲಿಸುತ್ತಲೇ ಹಿಂದೂಸ್ತಾನಿ ಸಂಗೀತವನ್ನು ಕಲಿತುಕೊಂಡರು. ಗುರುವಿನ ಮೂಲಕ ಶಾಸ್ತ್ರೀಯವಾದ ರೀತಿಯಲ್ಲಿ ಹಿಂದುಸ್ತಾನಿ ಸಂಗೀತವನ್ನು ಕಲಿಯಬೇಕೆಂದು ಅವರು ಬಯಸಿದರು. ಕುಮಾರಸ್ವಾಮಿಗಳು ಅವರ ಬಯಕೆಯನ್ನು ಈಡೇರಿಸಿಕೊಟ್ಟರು. ಖ್ಯಾತ ಸಂಗೀತಗಾರ ಅಬ್ದುಲ್



ವಹೀದಖಾನರನ್ನು ಶಿವಯೋಗ ಮಂದಿರಕ್ಕೆ ಕರೆತಂದು ಪಂಚಾಕ್ಷರಿ ಗವಾಯಿಗಳಿಗೆ ಹಿಂದೂಸ್ತಾನಿ ಸಂಗೀತ ಶಿಕ್ಷಣದ ಏರ್ಪಾಟು ಮಾಡಿದರು. ಅಬ್ದುಲ್ ವಹೀದಖಾನರು ಪಂಚಾಕ್ಷರಿ ಗವಾಯಿಗಳಿಗೆ ೧೯೧೮ರಿಂದ ೧೯೨೧ರವರೆಗೆ ಕಲಿಸಿದರು. ಅನಂತರ ಸುದೈವವಶಾತ್ ಸಂಗೀತಾಚಾರ್ಯ ನೀಲಕಂಠಬುವಾ ಮಿರಜಕರರು ಗವಾಯಿಗಳಿಗೆ ಗುರುಗಳಾಗಿ ಲಭಿಸಿದರು. ಶಾಸ್ತ್ರೋಕ್ತವಾದ ಕ್ರಮಬದ್ಧ ಪದ್ಧತಿಯ ಶಿಕ್ಷಣಕ್ಕೆ ಹೆಸರಾಗಿದ್ದ ನೀಲಕಂಠಬುವಾ ೧೯೨೨-೧೯೨೬ರ ಅವಧಿಯಲ್ಲಿ ಪಂಚಾಕ್ಷರಿ ಗವಾಯಿಗಳಿಗೆ ಶಿಕ್ಷಣ ನೀಡಿದರು.

ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದ್ದರೂ, ಇನ್ನೂ ಹೆಚ್ಚು ಕಲಿಯಬೇಕೆಂದು ಪಂಚಾಕ್ಷರಿ ಗವಾಯಿಗಳ ಹಂಬಲ. ಅವರು ಕೊನೆಯವರೆಗೂ ಸಂಗೀತ ಶಾಸ್ತ್ರದ ವಿದ್ಯಾರ್ಥಿಯೇ ಆಗಿದ್ದರು ಎಂಬುದು ಗಮನಾರ್ಹ. ತಮ್ಮ ಶಿಷ್ಯರಿಂದಲೂ ಅವರು ಅನೇಕ ಉತ್ತಮ ಅಂಶಗಳನ್ನು ಕಲಿತುಕೊಂಡರು. ಪಂಚಾಕ್ಷರಿ ಗವಾಯಿಗಳು ಗಾಯನದಲ್ಲಿ ಮಾತ್ರವಲ್ಲದೇ ತಬಲಾ ವಾದನದಲ್ಲಿಯೂ ಅಷ್ಟೇ ಕುಶಲರಾಗಿದ್ದರು. ಅವರು ತಬಲಾ ಕಲಿತ ರೀತಿ ಸ್ವಾರಸ್ಯಕರ ಘಟನೆಯಾಗಿದೆ. ಅವರು ತಬಲಾವಾದನವನ್ನು ಕಲಿಯಬೇಕೆಂದು ಬಯಸಿದ್ದಾರೆ ಎಂದು ತಿಳಿದಾಗ ಕುಮಾರಸ್ವಾಮಿಗಳು ಅವರ ಅಪೇಕ್ಷೆಯನ್ನು ಈಡೇರಿಸಲು ವ್ಯವಸ್ಥೆ ಮಾಡಿದರು. ಆದರೆ, ಪಂಚಾಕ್ಷರ ಗವಾಯಿಗಳು ತಬಲಾ ಕಲಿಯುವ ಅಪೇಕ್ಷೆಯುಳ್ಳ ತಮ್ಮ ಶಿಷ್ಯನೋರ್ವನಿಗೆ ಆ ಅವಕಾಶವನ್ನು ಕಲ್ಪಿಸಿಕೊಡಲು ಸ್ವಾಮಿಗಳನ್ನು ಕೇಳಿಕೊಂಡರು. ಅದಕ್ಕೆ ಒಪ್ಪಿದ ಸ್ವಾಮಿಗಳು ಆ ವಿದ್ಯಾರ್ಥಿಯನ್ನು ಅಂದಿನ ಸುಪ್ರಸಿದ್ಧ ತಬಲಾ ವಾದಕ ಬೆಳಗಾವಿಯ ಶಹಪೂರ ಮಲ್ಲೇಶಪ್ಪನವರ ಬಳಿಗೆ ಕಳುಹಿಸಿಕೊಟ್ಟರು. ತಬಲಾ ವಾದನ ಕಲಿತು ಮರಳಿ ಬಂದ ತಮ್ಮ ಶಿಷ್ಯನನ್ನೇ ಗುರುವಾಗಿಸಿಕೊಂಡು, ಪಂಚಾಕ್ಷರಿ ಗವಾಯಿಗಳು ತಬಲಾ ವಾದನ ಕಲೆಯನ್ನು ಕಲಿತುಕೊಂಡರು. ಶಿಗ್ಗಾವಿ ತಾಲ್ಲೂಕಿನ ಜೇಕಿನಕಟ್ಟಿ ಶಿವಯ್ಯನೇ ಆ ಶಿಷ್ಯನಾಗಿದ್ದನು. ಪಂಚಾಕ್ಷರಿ ಗವಾಯಿಗಳ ತಬಲಾ ವಾದನದಲ್ಲಿ ಒಂದು ವೈಶಿಷ್ಟ್ಯವಿದ್ದಿತು. ಅವರು ಎಡಗೈಯಿಂದ ತಬಲಾ, ಬಲಗೈಯಿಂದ ಡಗ್ಗಾ ಬಾರಿಸುತ್ತಿದ್ದರು. ಎಡಗೈ ನಡು ಬೆರಳಿನಿಂದ ಟಾಕಿ ಹಾಕುತ್ತಿದ್ದುದು ಅವರ ಇನ್ನೊಂದು ವೈಶಿಷ್ಟ್ಯವಾಗಿತ್ತು, ಗಾಯಕರ, ವಾದಕರ ಗುಣಮಟ್ಟಕ್ಕನುಗುಣವಾದ ರೀತಿಯಲ್ಲಿ ಅವರು ತಬಲಾ ಸಾಥಿ ನೀಡುತ್ತಿದ್ದರು.

ಸಂಗೀತ ಕ್ಷೇತ್ರದಲ್ಲಿನ ಎಲ್ಲ ಅಂಶಗಳನ್ನು ಕಲಿಯಬೇಕೆಂಬ ಇಚ್ಛೆಯು ಗವಾಯಿಗಳಲ್ಲಿ ತೀವ್ರತರವಾಗಿತ್ತು. ಅವಕಾಶ ಸಿಕ್ಕಾಗಲೆಲ್ಲಾ ಸಂಗೀತ ಸಾಧಕರ ಬಳಿ ಅಭ್ಯಾಸ ಮಾಡುವುದು ಅವರ ಪ್ರವೃತ್ತಿಯಾಗಿತ್ತು. ಬೆಳಗಾವಿಯ ಸ್ವಾಮಿಗಳ ಮಠದಲ್ಲಿ ನಾಲ್ಕಾರು ತಿಂಗಳುಗಳ ಕಾಲ ವಾಸ್ತವ್ಯ ಮಾಡಿದ್ದಾಗ, ಬೆಳಗಾವಿಯಲ್ಲಿದ್ದ ಹೆಸರಾಂತ ಸಂಗೀತಜ್ಞ, ರಾಮಕೃಷ್ಣಬುವಾ ವಝೆ ಅವರ ಬಳಿ ಅಭ್ಯಾಸ ಮಾಡಿದರು. ಬಾಬೂರಾವ ರಾಶೆ ಎಂಬುವರಲ್ಲಿ ಹಲವು ತಿಂಗಳು ಕಾಲ ಹಿಂದುಸ್ತಾನಿ ಸಂಗೀತವನ್ನು ಕಲಿತರು. ೧೯೩೭-೩೮ರಲ್ಲಿ ಗದಗಿನಲ್ಲಿ ವಾಸ್ತವ್ಯ ಮಾಡಿದ್ದ ಇನಾಯತ್ ಹುಸೇನ್ ಖಾನರ ಬಳಿಯಲ್ಲಿಯೂ ಪಂಚಾಕ್ಷರಿ ಗವಾಯಿಗಳು ಸಂಗೀತಾಭ್ಯಾಸ ಮಾಡಿದರು.

ಮಾನವರ ಸರ್ವಾಂಗೀಣ ಅಭ್ಯುನ್ನತಿಗೆ ಆಧ್ಯಾತ್ಮಿಕ ಸುಧಾರಣೆ ಮಾತ್ರವಲ್ಲದೇ ವ್ಯವಹಾರಿಕ ಸುಧಾರಣೆಯೂ ಅತ್ಯಗತ್ಯ ಎಂದು ಕುಮಾರಸ್ವಾಮಿಗಳು ಮನಗಂಡಿದ್ದರು. ಆರ್ಥಿಕವಾಗಿ ಹಿಂದುಳಿದ ಸಮಾಜದಲ್ಲಿ ಕೇವಲ ಸಂಗೀತ ಶಿಕ್ಷಣವನ್ನು ನೀಡುವ ಪಾಠಶಾಲೆ ವಿದ್ಯಾರ್ಥಿಗಳನ್ನು ಆಕರ್ಷಿಸಲಾರದು ಎಂಬುದನ್ನು ಅರಿತಿದ್ದರು. ಅಂತೆಯೇ ಸಂಗೀತದೊಡನೆ ಸಾಹಿತ್ಯವನ್ನೂ ಅಭ್ಯಸಿಸಲು ಅವಕಾಶವಾಗುವ ಪಾಠಶಾಲೆಯನ್ನು ಆರಂಭಿಸಬೇಕೆಂದು ತೀರ್ಮಾನಿಸಿದರು. ೧೯೧೪ರ ಆನಂದನಾಮ ಸಂವತ್ಸರ ವೈಶಾಖ ಶುದ್ಧ ತೃತೀಯ ಬಸವಜಯಂತಿಯ ಶುಭ ಮುಹೂರ್ತದಲ್ಲಿ ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ನಿಡಗುಂದಿಕೊಪ್ಪ ಶಾಖಾ ಶಿವಯೋಗ ಮಂದಿರದಲ್ಲಿ ಕುಮಾರೇಶ್ವರ **ಕೃಪಾಪೋಷಿತ ಸಂಗೀತ ಸಾಹಿತ್ಯ ಮಹಾವಿದ್ಯಾಲಯವನ್ನು** ಪ್ರಾರಂಭಿಸಿದರು. ಈ ಪಾಠಶಾಲೆಯ ಉಸ್ತುವಾರಿಯ ಹೊಣೆಗಾರಿಕೆಯನ್ನು ಪಂಚಾಕ್ಷರಿ ಗವಾಯಿಗಳಿಗೆ ವಹಿಸಿಕೊಟ್ಟರು. "ಪಂಚಾಕ್ಷರಿ, ನೀನು ನಿನ್ನ ಹೆಸರನ್ನು ಸಾರ್ಥಕ ಮಾಡಿಕೊಳ್ಳಬೇಕಾದರೆ ಆಜನ್ಮ ಬ್ರಹ್ಮಚಾರಿಯಾಗಿದ್ದು ನಿನ್ನಲ್ಲಿರುವ ವಿದ್ಯೆಯನ್ನು ಲೋಕದಲ್ಲೆಲ್ಲಾ ಪ್ರಸಾರ ಮಾಡು, ನಿನ್ನ ಶಾಲೆಯು ಒಂದೆಡೆ ಇರದೇ ಲೋಕ ಮಧ್ಯದಲ್ಲಿ ಸಂಚರಿಸುತ್ತಿರಲಿ" ಎಂಬುದಾಗಿ ಕುಮಾರಸ್ವಾಮಿಗಳು ಆದೇಶಿಸಿದರು. ಈ ಸಂಗೀತ ಶಾಲೆಯ ಅಧ್ಯಾಪಕರಾಗಿ ಪಂಚಾಕ್ಷರಿ ಗವಾಯಿಗಳು ಶ್ರದ್ಧೆಯಿಂದ ಶ್ರಮಿಸಿದರು.

ಪಂಚಾಕ್ಷರಿ ಗವಾಯಿಗಳು ಬಿಡಾರ ಮಾಡಿದಲ್ಲೆಲ್ಲ ಪುರಾಣ - ಕೀರ್ತನೆಗಳು ಸಂಗೀತಮಯವಾಗಿ ನಡೆಯುತ್ತಿದ್ದವು. ಜನಮನವನ್ನು ಗಾಢವಾಗಿ ತಟ್ಟುತ್ತಿದ್ದವು. ಶಿಕ್ಷಣ ಸೌಕರ್ಯದ ದೃಷ್ಟಿಯಿಂದ ಗವಾಯಿಗಳು ಸಂಗೀತ ಶಾಲೆಯನ್ನು ಎರಡು ಭಾಗಗಳನ್ನಾಗಿ ಮಾಡಿದರು. ಆರಂಭದ ವಿದ್ಯಾರ್ಥಿಗಳಿಗೆ ಪ್ರಯಾಣದ ಸಮಯದಲ್ಲಿ ಸರಿಯಾಗಿ ಸಂಗೀತ ಶಿಕ್ಷಣ ಸಿಕ್ಕುತ್ತಿರಲಿಲ್ಲ. ಈ ಕೊರತೆಯನ್ನು ನೀಗಿಸಲು ಸ್ಥಾಯಿಕ ಸಂಗೀತ ಶಾಲೆಯನ್ನು ರೂಪಿಸಿದರು. ಆರಂಭದ ಹಂತದಲ್ಲಿ ಸ್ಥಾಯಿಕ ಶಾಲೆಯು ಬೆಳಗಾವಿ, ಶಹಪೂರ, ಸಂಪಗಾವಿ, ನವಿಲುಗುಂದ, ಬಂಕಾಪೂರ, ಲಿಂಗದಳ್ಳಿಯಲ್ಲಿ ನಡೆಯಿತು. ಅನಂತರ ಕೆಲಕಾಲ ಗಜೇಂದ್ರಗಡದಲ್ಲಿ ನಡೆಯಿತು. ಕಮತಗಿಯ ಶ್ರೀ ಗದಿಗೆಪ್ಪ ಗವಾಯಿಗಳು ಸಂಗೀತ ಶಿಕ್ಷಕರಾಗಿದ್ದರು. ತದನಂತರ, ಗುಳೇದಗುಡ್ಡದ ಸದ್ಭಕ್ತರ ಇಚ್ಛೆಯ ಮೇರೆಗೆ ಶ್ರೀ ಹುಚ್ಚೇಶ್ವರ ಮಠಕ್ಕೆ ಸ್ಥಳಾಂತರಗೊಂಡಿತು. ಈ ಸಂಗೀತ ಶಾಲೆಯಲ್ಲಿ ಕೊಡಮಾಡುವ ಶಿಕ್ಷಣವು ಲೋಕಕ್ಕೆ ಉಪಯೋಗವಾಗಲೆಂಬ ಉದ್ದೇಶದಿಂದ ಸಂಗೀತದೊಂದಿಗೆ ಕನ್ನಡ, ಸಂಸ್ಕೃತ ಸಾಹಿತ್ಯ ಶಿಕ್ಷಣವನ್ನು ನೀಡುವ ಏರ್ಪಾಡು ಮಾಡಲಾಯಿತು. ಸ್ಥಾಯಿಕ ಶಾಲೆಯಲ್ಲಿ ದ್ಯಾಂಪುರದ ಶ್ರೀ ಮಹಾಲಿಂಗಯ್ಯನವರು ಸಾಹಿತ್ಯ ಶಿಕ್ಷಕರಾಗಿದ್ದರು. ಸಂಚಾರಿ ಸಂಗೀತ ಶಾಲೆಯಲ್ಲಿ ಕನ್ನಡ, ಸಂಸ್ಕೃತ ಪಾಠಗಳನ್ನು ಶ್ರೀ ಪುಟ್ಟರಾಜ ಗವಾಯಿಗಳು ಮೌಖಿಕವಾಗಿ ಹೇಳಿಕೊಡುತ್ತಿದ್ದರು.

ಶಿವಯೋಗ ಮಂದಿರದ ಈ ಸಂಗೀತ ಶಾಲೆಯು ಅನತಿಕಾಲದಲ್ಲಿ ಅಪಾರ ಪ್ರಗತಿ ಸಾಧಿಸಿತು. ೧೯೩೯ರಲ್ಲಿ ಈ ಸಂಗೀತ ಶಾಲೆಯು ರಜತಮಹೋತ್ಸವವನ್ನು ಆಚರಿಸಲಾಯಿತು. ಈ ಸಂಗೀತ ಶಾಲೆಯು ಅಂತಿಮವಾಗಿ ಗದಗಿನಲ್ಲಿ ಸ್ಥಿರವಾಯಿತು. ಅಂದಿನಿಂದ ಇಂದಿನವರೆಗೆ ಈ



ಶಾಲೆ ನಿರಂತರವಾಗಿ ವಿದ್ಯಾದಾನ ಮಾಡುತ್ತಾ ತನ್ನದೇ ಆದ ವಿಶಿಷ್ಟ ಪರಂಪರೆಗಳನ್ನು ರೂಢಿಸಿಕೊಂಡು ಬಂದಿದೆ. ಈ ಸಂಸ್ಥೆಯಲ್ಲಿ ಅನೇಕ ಅನಾಥ ಕುರುಡ ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೊಡಗಿದ್ದಾರೆ. ಸಂಗೀತದಲ್ಲಿ ಒಳ್ಳೆಯ ಸಾಧನೆಯನ್ನು ಮಾಡುತ್ತಿದ್ದಾರೆ. ಸಂಗೀತದೊಂದಿಗೆ, ಕನ್ನಡ, ಸಂಸ್ಕೃತ ಹಾಗೂ ಹಿಂದಿ ಸಾಹಿತ್ಯದ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಜನ್ಮಾಂಧ ವಿದ್ಯಾರ್ಥಿಗಳಿಗೆ ಕುರುಡು ಲಿಪಿಯ ಮೂಲಕ ಓದು ಬರಹವನ್ನು ಕಲಿಸುವ ವ್ಯವಸ್ಥೆ ಇದೆ. ಇಂತಹ ಮಾದರಿಯ ಸಂಸ್ಥೆ ಇಡೀ ಭಾರತದಲ್ಲಿ ಇನ್ನೊಂದಿಲ್ಲ ಎನ್ನಬಹುದು. ಇಂದು ಕನ್ನಡ ನಾಡಿನಲ್ಲಿ ಕಾಣಬರುತ್ತಿರುವ ಸಂಗೀತ ಪ್ರಚಾರಕ್ಕೆ ಈ ಸಂಸ್ಥೆಯೇ ಕಾರಣವಾಗಿದೆ. ನೂರಾರು ಜನ ನುರಿತ ಶಿಕ್ಷಕರನ್ನು, ಸಂಗೀತ ಕಲಾ ನಿಪುಣರನ್ನು ಈ ಸಂಸ್ಥೆಯು ಸಮಾಜಕ್ಕೆ ಕಾಣಿಕೆಯಾಗಿ ನೀಡಿದೆ. ಉಳ್ಳವರು ಜಗತ್ತಿಗೆ ಬೇಕಾದ ಉಪಕಾರ ಮಾಡಬಹುದು. ಆದರೆ ಕಣ್ಣಿಲ್ಲದ ಅಸಹಾಯಕ ಸ್ಥಿತಿಯಲ್ಲಿದ್ದ ಗವಾಯಿಗಳು ಕಣ್ಣಿಲ್ಲದವರಿಗೆ ಮತ್ತು ನಿರ್ಗತಿಕರಿಗೆ ಗಾನ ವಿದ್ಯೆಯನ್ನು ದಾನ ಮಾಡಿದ್ದು, ಮತ್ತು ನಿರಂತರವಾಗಿ ಅಂತಹ ವ್ಯವಸ್ಥೆಯೊಂದನ್ನು ರೂಪಿಸಿ ಬೆಳೆಸಿದ್ದು ಒಂದು ಮಹಾನ್ ಸಾಧನೆಯಲ್ಲದೇ ಮತ್ತೇನು?

ಪಂಚಾಕ್ಷರಿ ಗವಾಯಿಗಳು ಅನುದಿನವೂ ತಮ್ಮ ಶಿಷ್ಯರಿಗೆ ಸಂಗೀತಾಭ್ಯಾಸವನ್ನು ಮಾಡಿಸುತ್ತಿದ್ದರು. ಬೆಳಗಿನ ೪ಘಂಟೆಯಿಂದ ಆರಂಭವಾಗುತ್ತಿದ್ದ ಅವರ ದಿನಚರಿ ರಾತ್ರಿ ೧೨ಘಂಟೆಯವರೆಗೂ ನಡೆಯುತ್ತಿತ್ತು. ತನ್ಮಧ್ಯೆ ತಮ್ಮ ಸಂಗೀತಾಭ್ಯಾಸವನ್ನೂ ಮಾಡುತ್ತಿದ್ದರು. ತಬಲಾ, ಪಖವಾಜ ವಾದನಗಳಲ್ಲಿ ಅತ್ಯಂತ ಹೆಚ್ಚಿನ ಸಾಧನೆಯನ್ನು ಮಾಡಿದರು. ಗಾಯನವಲ್ಲದೇ ಹಾರ್ಮೋನಿಯಂ, ಪಿಟೀಲು, ಸಾರಂಗಿ, ದಿಲ್ರುಬಾ ಹಾಗೂ ಕೊಳಲು ವಾದ್ಯಗಳನ್ನು ಹೇಳಿಕೊಡುವುದರಲ್ಲಿ ನಿಷ್ಣಾತರಾಗಿದ್ದರು. ಗಾಯಕರಾಗಿ, ಕೀರ್ತನಕಾರರಾಗಿ ಜನಮನ್ನಣೆಯನ್ನು ಪಡೆದರು. ಎಲ್ಲೆಡೆಗಳಲ್ಲಿ ವಿದ್ವಾಂಸರು, ಕಲಾಪ್ರೇಮಿಗಳು ಅವರಿಗೆ ಬಿರುದುಗಳನ್ನು ನೀಡಿ ಗೌರವಿಸಿ ಸತ್ಕರಿಸಿದರು. ಹುಬ್ಬಳ್ಳಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದ ಅಂಗವಾಗಿ ನಡೆದ ಸಂಗೀತ ಗೋಷ್ಠಿಯ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಅವರ ಘನ ಸಂಸ್ಥೆಯಲ್ಲಿ ಕೀರ್ತನಕಾರರು, ಗವಾಯಿಗಳು, ಹಾರ್ಮೋನಿಯಂ, ತಬಲಾವಾದಕರು, ವೀಣೆ ನುಡಿಸುವವರು ಹೀಗೆ ಅನೇಕ ವಿದ್ಯಾರ್ಥಿಗಳು ತರಬೇತಿ ಪಡೆದಿದ್ದಾರೆ. ಸಮಾಜದ ಉದ್ಧಾರಕ್ಕಾಗಿ ಕೀರ್ತನ ಕಲೆಯನ್ನು ಕಲಿತು, ನಾಡಿನಲ್ಲಿ ಅದರ ಪ್ರಚಾರ ಮಾಡಿದರು. ಮುಂಬೈಯಲ್ಲಿ ಹಲವೆಡೆಗಳಲ್ಲಿ ಸಂಗೀತ ಕಚೇರಿ ನೀಡಿ ತಮ್ಮ ಸಂಚಾರಿ ಶಾಲೆಗಾಗಿ ಆ ಕಾಲಕ್ಕೆ ರೂ ೭,೦೦೦/- ಗಳ ದೇಣಿಗೆಯನ್ನು ಸಂಗ್ರಹಿಸಿದರು. ಅದನ್ನು ಸಂಗೀತ ಪ್ರಸಾರ ಮತ್ತು ಸಂಗೀತ ಶಾಲೆಗೆ ವಿನಿಯೋಗಿಸಿದರು.

ಹಲವು ಗುರುಗಳಿಂದ ಕಲಿತು, ಅನೇಕರ ಗಾಯನವನ್ನು ಆಲಿಸಿದ ಫಲವಾಗಿ ಪಂಚಾಕ್ಷರಿ ಗವಾಯಿಗಳ ಗಾಯನದಲ್ಲಿ ಹಲವು ಘರಾಣೆ ಶೈಲಿಗಳ, ಹಲವು ಗಾಯನ ಪ್ರಕಾರಗಳ ಮಾಧುರ್ಯ, ವೈವಿಧ್ಯತೆ ಸಮ್ಮಿಳಿತಗೊಂಡಿದ್ದವು. ಖ್ಯಾಲ್, ಠುಮರಿ, ಘಜಲ್, ಟಪ್ಪಾ, ಧ್ರುಪದಗಳನ್ನು ಅವರು ಲೀಲಾಜಾಲವಾಗಿ ಹಾಡಬಲ್ಲರಾಗಿದ್ದರು. ವಿದ್ವತ್ತು, ಸರಳತೆ, ವಾತ್ಸಲ್ಯಗಳಿಂದ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಗುರುಗಳಾಗಿದ್ದರು. ಸರಳ ರೀತಿಯ ಅವರ ಕಲಿಸುವಿಕೆಯ ಕ್ರಮವು ಶಾಸ್ತ್ರೀಯವಾಗಿತ್ತು. ಸ್ವರಸಾಧನೆಗೆ ಅವರು ಪ್ರಾಧಾನ್ಯವನ್ನು ನೀಡುತ್ತಿದ್ದರು. ಸಂಗೀತಕ್ಕೆ ಸ್ವರಾಭ್ಯಾಸವೇ ಬುನಾದಿಯಾದ್ದರಿಂದ ಆಕಾರದಿಂದಲೇ ಕಲಿಕೆಯನ್ನು ಆರಂಭಿಸುತ್ತಿದ್ದರು. ಅದು ವಿದ್ಯಾರ್ಥಿಗೆ ಕಠಿಣವೆನಿಸಿದರೆ, ಸರಿಗಮದಿಂದ ಪಾಠವನ್ನು ಆರಂಭಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಸ್ವರಜ್ಞಾನ ಚೆನ್ನಾಗಿ ಅರಿವಾದ ಬಳಿಕ ರಾಗಗಳನ್ನು ಕಲಿಸುತ್ತಿದ್ದರು. ಆರೋಹ, ಅವರೋಹ, ವಾದಿ-ಸಂವಾದಿ ಸ್ವರಗಳು, ವಿಲಂಬಿತದಲ್ಲಿ ರಾಗ ವಿಸ್ತಾರ ಮಾಡುವ ಬಗ್ಗೆ, ಸ್ಥಾಯಿ, ಅಂತರಾ, ಬೋಲತಾನ, ಗಮಕತಾನ, ದೃತ್‌ನಲ್ಲಿ ಸಂಚಾರ ಇವೆಲ್ಲವುಗಳನ್ನು ಹಂತ ಹಂತವಾಗಿ ಸುವಿಸ್ತಾರವಾಗಿ ಅಭ್ಯಾಸ ಮಾಡಿಸುತ್ತಿದ್ದರು. ಚೀಜುಗಳ ಅರ್ಥ, ಪ್ರತಿರಾಗದ ರಸಭಾವ ವಿಶದೀಕರಿಸಿ, ಆಯಾ ರಾಗದ ಸ್ವಭಾವ ವಿದ್ಯಾರ್ಥಿಗಳ ಮನದಲ್ಲಿ ಸ್ಥಿರವಾಗಿ ನಿಲ್ಲುವಂತೆ ಪಾಠ ಹೇಳುತ್ತಿದ್ದರು. ಕಠಿಣ ವಿಷಯಗಳನ್ನು ನಿರಾಯಾಸವಾಗಿ ಕಲಿಸುವ ಜಾಣ್ಮೆ ಪಂಚಾಕ್ಷರ ಗವಾಯಿಗಳದು ಎಂಬುದಾಗಿ ಪ್ರಸಿದ್ಧ ಸಂಗೀತ ವಿಮರ್ಶಕ-ಲೇಖಕ ಸದಾನಂದ ಕನವಳ್ಳಿಯವರು ತಮ್ಮ ಲೇಖನವೊಂದರಲ್ಲಿ ಉಲ್ಲೇಖಿಸಿದ್ದಾರೆ.

೧೯೩೭ರಲ್ಲಿ ಕೊಣ್ಣೂರಿನಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಪಂಚಾಕ್ಷರ ಗವಾಯಿಗಳ ಗಾಯನವನ್ನು ಆಲಿಸಿದ ಮೈಸೂರಿನ ಬಿಡಾರಂ ಕೃಷ್ಣಪ್ಪನವರು ನಮ್ಮ ಮೈಸೂರು ಆಸ್ಥಾನದಲ್ಲಿ ಪಂಚಾಕ್ಷರ ಗವಾಯಿಗಳಂತಹ ಗವಾಯಿ ಇಲ್ಲ. ಉತ್ತರ ಕರ್ನಾಟಕದಲ್ಲಿ ಇಂತಹ ವಿದ್ವಾಂಸರು ಇದ್ದುದರ ಕಲ್ಪನೆ ನಮಗಿರಲಿಲ್ಲ ಎಂದು ಉದ್ಗರಿಸಿದರು. ಜಮಖಂಡಿ, ಸಾಂಗಲಿ, ಕೊಲ್ಹಾಪೂರ ಮೊದಲಾದ ಪಟ್ಟಣಗಳಲ್ಲಿ ಮತ್ತು ರಾಜರ ಅರಮನೆಗಳಲ್ಲಿ ಪಂಚಾಕ್ಷರ ಗವಾಯಿಗಳ ಕಚೇರಿಗಳು ಯಶಸ್ವಿಯಾಗಿ ನಡೆದು ಮುಕ್ತ ಕಂಠದ ಪ್ರಶಂಸೆ ಸಂಪಾದಿಸಿದವು.

ಪಂಚಾಕ್ಷರಿ ಗವಾಯಿಗಳು ನಿಷ್ಣಾತ ಕೀರ್ತನಕಾರರಾಗಿದ್ದರು. ಮೋಡಿ ಮಾಡಬಲ್ಲ ಅವರ ವಾಗ್ಝರಿ, ಸಮಯಾನುಸಾರ ಸಾದರ ಪಡಿಸುತ್ತಿದ್ದ ರಸವತ್ತಾದ ಹಾಸ್ಯ ಪ್ರವೃತ್ತಿ, ಕಥೆ ಹೇಳುವ ಕಲೆ ಅವರನ್ನು ಶ್ರೇಷ್ಠ ಮಟ್ಟದ ಕೀರ್ತನಕಾರರನ್ನಾಗಿ ಮಾಡಿತ್ತು. ಶಿವಕೀರ್ತನಪಟು ಎಂದೇ ಖ್ಯಾತಿಯನ್ನು ಹೊಂದಿದ್ದು ಅವರಿಗೆ ಜನರನ್ನು ಮಂತ್ರಮುಗ್ಧರನ್ನಾಗಿಸುವ ಕಲೆ ಕರಗತವಾಗಿತ್ತು.

೧೯೩೦ರ ದಶಕದಲ್ಲಿಯೇ ಕನ್ನಡ ಭಾಷೆಯ ಬೆಳವಣಿಗೆಯ ಬಗೆಗೆ ಪಂಚಾಕ್ಷರಿ ಗವಾಯಿಗಳು ಆಸಕ್ತಿ ತಳೆದಿದ್ದರೆಂಬುದು ಅಭಿಮಾನದ ಸಂಗತಿ. ೧೯೩೩ರಲ್ಲಿ ಎಚ್. ಎಮ್. ವಿ. ಕಂಪೆನಿಯಿಂದ ಧ್ವನಿಮುದ್ರಣಕ್ಕಾಗಿ ಗವಾಯಿಗಳಿಗೆ ಆಹ್ವಾನ ಬಂದಿತ್ತು. ಕನ್ನಡ ಚೀಜುಗಳನ್ನು ಹಾಡುವುದಾಗಿ ಅವರು ಹೇಳಿದಾಗ ಕಂಪೆನಿಯವರು ಗಾಬರಿಗೊಂಡು ಸಾಧ್ಯವಿಲ್ಲವೆಂದು ಹೇಳಿದರು. ಕನ್ನಡ ಚೀಜುಗಳಿಗೆ ಅವಕಾಶವಿಲ್ಲದಿದ್ದರೆ ಧ್ವನಿಮುದ್ರಣವೇ ಬೇಡ ಎಂದು ಗವಾಯಿಗಳೂ ಸ್ಪಷ್ಟಪಡಿಸಿದರು. ಕೊನೆಯಲ್ಲಿ ಎಚ್. ಎಂ. ವಿ. ಕಂಪನಿಯವರು ಅವರ ಷರತ್ತನ್ನು ಮನ್ನಿಸಿದರು. ಈಗಲೂ ಕೂಡಾ ಗಾಯಕರು ಕನ್ನಡ (ವಚನಗಳನ್ನುಳಿದು) ಚೀಜುಗಳನ್ನು ಹಾಡಲು ಹಿಂದೇಟು ಹಾಕುತ್ತಿರುವ ಹಿನ್ನಲೆಯಲ್ಲಿ ಐವತ್ತು ವರ್ಷಗಳಷ್ಟು ಕಾಲದ ಹಿಂದೆಯೇ



ಪಂಚಾಕ್ಷರಿ ಗವಾಯಿಗಳು ಕನ್ನಡ ಡಿಂಡಿಮವನ್ನು ಬಾರಿಸಿದುದು ಅವರ ಮಾತೃಭಾಷಾ ಪ್ರೇಮವನ್ನು ನಿದರ್ಶಿಸುತ್ತದೆ.

೧೯೪೦ರಲ್ಲಿ ದೇಶದಲ್ಲಿ ಭೀಕರ ಕ್ಷಾಮ ತಲೆದೋರಿತು. ಆ ಸಮಯದಲ್ಲಿ ಪಂಚಾಕ್ಷರಿ ಗವಾಯಿಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಶಿಷ್ಯರಿದ್ದರು. ಹತ್ತು ಸಾವಿರ ರೂಪಾಯಿಗಳ ಸಾಲದ ಹೊರೆ ಇದ್ದಿತ್ತು. ಇದು ಅವರ ಪಾಲಿಗೆ ಕಠಿಣ ಪರೀಕ್ಷೆಯ ಸನ್ನಿವೇಶವಾಗಿತ್ತು. ಶಿಷ್ಯರನ್ನು ಕೆಲಕಾಲ ಅವರ ಊರುಗಳಿಗೆ ಕಳುಹಿಸಬೇಕೆಂದು ಕೆಲವರು ಸಲಹೆ ಮಾಡಿದರು. ಆದರೆ ಪಂಚಾಕ್ಷರ ಗವಾಯಿಗಳು ಅವರ ಸಲಹೆಯನ್ನು ತಿರಸ್ಕರಿಸಿದರು. ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಿದ್ದ ಆ ಬಡ ಮಕ್ಕಳನ್ನು ಅವರ ಊರುಗಳಿಗೆ ಕಳುಹಿಸುವುದು ಸಲ್ಲದೆಂದು ಹೇಳಿದರು. ದಿಟ್ಟತನದಿಂದ ದುರ್ಭರ ಪ್ರಸಂಗವನ್ನು ಎದುರಿಸಲು ಸಿದ್ಧರಾದರು. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಪಾಲಿನ ಕಾಯಕವನ್ನು ತಾನೇ ಮಾಡಬೇಕೆಂದು ಅಪ್ಪಣೆ ಕೊಡಿಸಿದರು. ಸಂಸ್ಥೆಯ ನಿರ್ವಹಣೆಗೋಸ್ಕರ ೧೯೪೦ರ ವಿಜಯದಶಮಿಯಂದು ನರಗುಂದದಲ್ಲಿ ಸೊಲ್ಲಾಪುರದ ಸಿದ್ಧರಾಮೇಶ್ವರ ಎಂಬ ನಾಟಕವನ್ನು ತಮ್ಮ ತಮ್ಮ ಊರುಗಳಲ್ಲಿ ಆಡಬೇಕೆಂದು ಪ್ರೇಕ್ಷಕರು ಬಿನ್ನವಿಸಿದರು. ಈ ಪ್ರತಿಕ್ರಿಯೆಯಿಂದ ಉತ್ಸಾಹಿತರಾದ ಗವಾಯಿಗಳು ತಮ್ಮ ನಾಟಕ ಸಂಘಕ್ಕೆ ಶ್ರೀ ಕುಮಾರೇಶ್ವರ ಕೃಪಾಪೋಷಿತ ನಾಟಕ ಸಂಘ ಎಂಬ ಹೆಸರಿಟ್ಟು, ಸ್ಥಿರಗೊಳಿಸಿದರು. ಈ ನಾಟಕ ಸಂಘವು ಗದಗದಲ್ಲಿ ಹೇಮರೆಡ್ಡಿ ಮಲ್ಲಮ್ಮ ನಾಟಕದ ಒಂಟಿಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿತು. ಸಂಗೀತ, ಸಾಹಿತ್ಯ, ನಾಟ್ಯಕಲೆಗಳ ಸಂಗಮವಾಗಿದ್ದ ಈ ಸಂಘವು ಸಾವಿರಾರು ವಿದ್ಯಾರ್ಥಿಗಳಿಗೆ ನಾನಾ ಕಲೆಗಳನ್ನು ಕಲಿಸಿಕೊಟ್ಟಿತು. ಉತ್ತಮ ತರಗತಿಯ ನಾಟಕ ಕಲೆಯನ್ನು ಅಭಿನಯ ಕಲಾಕಾರರಿಗೆ ಕಲಿಸಿಕೊಟ್ಟು ತನ್ಮೂಲಕ ಸಮಾಜದಲ್ಲಿ ನೈತಿಕ ಮನೋಭಾವವನ್ನು ಪೋಷಿಸಿ ಬೆಳೆಸಿದ ಹೆಗ್ಗಳಿಕೆ ಅವರ ನಾಟ್ಯ ಸಂಘದ್ದು.

ಅಸಂಖ್ಯ ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಪಂಡಿತ ಪಂಚಾಕ್ಷರಿ ಗವಾಯಿಗಳು ಊರಿಂದ ಊರಿಗೆ ಅಲೆದಾಡುತ್ತಿದ್ದರು. ಕೀರ್ತನ, ನಾಟಕಗಳಿಂದ ಆರ್ಜಿಸಿದ ಹಣದಿಂದ ಅವರ ಹೊಟ್ಟೆ-ಬಟ್ಟೆ ನಡೆಯಬೇಕಿತ್ತು. ಎಲ್ಲಿಯಾದರೂ ಒಂದೆಡೆಯಲ್ಲಿ ನೆಲೆ ನಿಂತು ಶಿಷ್ಯರಿಗೆ ಸಂಗೀತ ಪಾಠ ಹೇಳಿಕೊಡುವ ಆಶೆ ಅವರಿಗಿತ್ತಾದರೂ ಅಂದಿನ ಪರಿಸ್ಥಿತಿಯಲ್ಲಿ ಅದು ಅಸಾಧ್ಯವಾಗಿತ್ತು. ತಮ್ಮ ಗುರಿಯತ್ತ ಅಚಲ ವಿಶ್ವಾಸದಿಂದ, ದೃಢ ನಿಶ್ಚಯದಿಂದ ಮುನ್ನಡೆದಿದ್ದ ಪಂಚಾಕ್ಷರಿ ಗವಾಯಿಗಳು ತಮ್ಮ ಅಲೆಮಾರಿ ಜೀವನದಲ್ಲಿಯೇ ತಮ್ಮ ಕಾರ್ಯವನ್ನು ಅನೂಚಾನವಾಗಿ ನಡೆಸುತ್ತ ಬಂದಿದ್ದರು. ೧೯೪೩ರಲ್ಲಿ ಗವಾಯಿಗಳ ಕ್ಯಾಂಪು ಶಿರಹಟ್ಟಿಯಲ್ಲಿತ್ತು. ಎಂಬತ್ತು ಜನ ಶಿಷ್ಯರನ್ನು ಪೋಷಿಸಬೇಕಾಗಿತ್ತು. ಅದಕ್ಕೆ ಮಿಗಿಲಾಗಿ ಸಾಲದ ಹೊರೆ. ಆ ದಿನಗಳು ಗವಾಯಿಗಳ ಕಡುಕಷ್ಟದ ದಿನಗಳಾಗಿದ್ದವು. ಗದಗಿನ ಸಮಾಜ ಸೇವಾ ಮನೋಭಾವದ ಕೊಡುಗೈ ದಾನಿಯಾದ ಶ್ರೀ ವೀರಪ್ಪ ಬಸರೀಗಿಡದ ಅವರಿಗೆ ಗವಾಯಿಗಳ ಬಗೆಗಿನ ಸುದ್ದಿ ತಿಳಿಯಿತು. ಅವರನ್ನು ಗದಗಿಗೆ ಕರೆತಂದು ತಮ್ಮ ಜಾಗದಲ್ಲಿ ವಿರೇಶ್ವರ ಪುಣ್ಯಾಶ್ರಮ ಕಟ್ಟಿಸಿ ಪಂಚಾಕ್ಷರ ಗವಾಯಿಗಳು ಗದಗಿನಲ್ಲಿ ಶಾಶ್ವತವಾಗಿ ನೆಲೆ ನಿಲ್ಲಲು ಅನುಕೂಲ ಒದಗಿಸಿದರು.

ಪಂಡಿತ ಪಂಚಾಕ್ಷರಿ ಗವಾಯಿಗಳು ಹುಟ್ಟು ಕುರುಡರಾಗಿದ್ದರೂ ನಾದಜ್ಞಾನ ಚಕ್ಷುಗಳಾಗಿದ್ದರು. ಅವರ ಜೀವನವು ಶ್ರುತಿಗೊಳಿಸಿದ ವೀಣೆಯಂತಿತ್ತು. ನಾದ ಯೋಗದಿಂದಲೇ ನಾದ ಬ್ರಹ್ಮನನ್ನು ಒಲಿಸಿಕೊಂಡರು. ನಾದಾಂತನನ್ನೇ ವೇದಾಂತನೆಂದು ಭಾವಿಸಿ ಪರಿಪೂರ್ಣತೆಯತ್ತ ನಡೆದರು. ಕೇವಲ ಗಾಯಕರಷ್ಟೇ ಅಲ್ಲದೆ, ವಾಗ್ಗೇಯಕಾರರು, ನಾಟಕಕಾರರು ಎಂಬ ಖ್ಯಾತಿಯನ್ನು ಪಡೆದರು. ಅಪಾರ ಶಿಷ್ಯವೃಂದವನ್ನು ಸೃಷ್ಟಿಸಿಕೊಂಡು ತಮ್ಮ ಧ್ಯೇಯ ಸಾಧನೆಯ ವ್ಯಾಪ್ತಿಯನ್ನು ವಿಸ್ತರಿಸಿದ ಹಿರಿಮೆ ಇವರದು. ಸರ್ವಧರ್ಮೀಯ ವಿದ್ಯಾರ್ಥಿಗಳನ್ನು ಹೊಂದಿದ್ದ ಅವರ ಮನೋಭಾವನೆ ಅತ್ಯಂತ ವಿಶಾಲವಾಗಿತ್ತು. ಮಾನವೀಯ ಅನುಕಂಪದಿಂದ ಕೂಡಿತ್ತು. ಜಾತಿ, ಮತ ಪಂಥವೆನ್ನದೆ ಯಾರಲ್ಲಿಯೂ ವ್ಯತ್ಯಾಸವನ್ನು ಎಣಿಸದೆ, ತಮ್ಮ ಬಳಿ ಬರುವ ಸಕಲರಿಗೂ ಆಶ್ರಯವಿತ್ತರು. ಸರಕಾರದಿಂದ ನೆರವು ಪಡೆಯದೇ ಉಚಿತ ಊಟ, ವಸತಿ, ವಿದ್ಯೆಗಳನ್ನು ನೀಡುವ ವೀರೇಶ್ವರ ಪುಣ್ಯಾಶ್ರಮವು ಭಾರತದಲ್ಲಿ ಏಕಮೇವವಾದುದು ಎಂದು ಹೇಳಬಹುದು.

ಯಾವುದೊಂದು ಸಂಸ್ಥೆಯ ಹಿರಿಮೆ, ಘನತೆ, ಉದಾತ್ತತೆ ಅದಕ್ಕೆ ಸಂಬಂಧಿಸಿದ ಸ್ಥಾವರ ಆಸ್ತಿಪಾಸ್ತಿಗಳನ್ನು ಆಧರಿಸಿರುವುದಿಲ್ಲ. ಪಂಡಿತ ಪಂಚಾಕ್ಷರಿ ಗವಾಯಿಗಳ ಸಂಗೀತ ಶಾಲೆಯ ಹಿರಿಮೆ ಅದರ ಶಿಷ್ಯರ ಸಾಧನೆಗಳ ಮೂಲಕ ನಿದರ್ಶನಗೊಂಡಿವೆ. ಮೂರು ದಶಕಗಳ ಅವಿಚ್ಛಿನ್ನವಾಗಿ ಸಂಗೀತ ಬೋಧನೆ, ಸಾಧನೆ ಮಾಡಿದ ಗವಾಯಿಗಳು ಅಪಾರ ಶಿಷ್ಯ ಸಂಪತ್ತನ್ನು ಆರ್ಜಿಸಿದ್ದಾರೆ. ಅವರ ಶಿಷ್ಯರಲ್ಲಿ ಅನೇಕರು ಶಾಲೆಗಳಲ್ಲಿ, ಬೇರೆ ಬೇರೆ ಸಂಸ್ಥೆಗಳಲ್ಲಿ ಅಧ್ಯಾಪನ ವೃತ್ತಿಯನ್ನು ಕೈಕೊಂಡಿದ್ದಾರೆ. ಹಲವಾರು ಮಂದಿ ಕೀರ್ತನಕಾರರಾಗಿದ್ದಾರೆ. ಕೆಲವರು ಬಾನುಲಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಜನ್ಮಾಂಧ ವಿದ್ಯಾರ್ಥಿಗಳು ಸಂಗೀತ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ನಾವು ಕುರುಡರೆಂದು ವ್ಯಸನಪಡದೆ ಸ್ವಾವಲಂಬನದ ಜೀವನವನ್ನು ಸಾಗಿಸಲು ಕಲಿಯಬೇಕು ಎಂದು ಗವಾಯಿಗಳು ತಮ್ಮ ಕುರುಡ ಶಿಷ್ಯರಿಗೆ ಉಪದೇಶಿಸಿದ್ದಾರೆ. ದೂರದ ಮುಂಬೈ ಮತ್ತು ಮದರಾಸುಗಳಲ್ಲಿಯೂ ಈ ಆಶ್ರಮದ ಶಿಷ್ಯರಿದ್ದಾರೆ. ಅಲ್ಲಿ ಅವರು ಕಲೆಯ ಕ್ಷೇತ್ರದಲ್ಲಿ ಹೆಸರನ್ನು ಗಳಿಸಿ ನೆಮ್ಮದಿಯಿಂದ ಬದುಕುತ್ತಿದ್ದಾರೆ.

ಪಂಡಿತ ಪಂಚಾಕ್ಷರಿ ಗವಾಯಿಗಳ ಗರಡಿಯಲ್ಲಿ ತರಬೇತಿ ಪಡೆದು ಸಕಲಶಾಸ್ತ್ರ ಕಲಾ ನಿಪುಣರಾಗಿ ಗುರುವಿನ ನಂತರದಲ್ಲಿ ಪುಣ್ಯಾಶ್ರಮದ ಕುಲಪತಿಗಳಾಗಿ, ಗುರುವಿನ ಕಾರ್ಯವನ್ನು ಮುನ್ನಡೆಸಿಕೊಂಡು ಬರುತ್ತಿರುವ ಶ್ರೀ ಪುಟ್ಟರಾಜ ಗವಾಯಿಗಳು ಪಂಡಿತ ಪಂಚಾಕ್ಷರಿ ಗವಾಯಿಗಳ ಹೆಮ್ಮೆಯ ಶಿಷ್ಯರು. ಸಂಸ್ಕೃತ, ಕನ್ನಡ, ಹಿಂದಿ ಭಾಷೆಗಳಲ್ಲಿ ಕವಿತ್ವ ಶಕ್ತಿಯನ್ನು ಬೆಳೆಸಿಕೊಂಡು ಆ ಭಾಷೆಗಳಲ್ಲಿ ಉತ್ತಮ ಕಾವ್ಯ ರಚನೆ ಮಾಡಿ ಪಂಡಿತರಿಂದ ಸನ್ಮಾನಿತರಾಗಿದ್ದಾರೆ.

ಪಂಚಾಕ್ಷರಿ ಗವಾಯಿಗಳಲ್ಲಿ ಕಲಿತ ಗಾಯಕರು, ವಾದಕರು, ಕೀರ್ತನಕಾರರಿಗೆ ಲೆಕ್ಕವಿಲ್ಲ. ಪುಟ್ಟರಾಜ ಗವಾಯಿಗಳು, ಬಸವರಾಜ ರಾಜಗುರು, ಚಿತ್ತರಗಿಯ ಗಂಗಾಧರಶಾಸ್ತ್ರಿ, ಸಿದ್ಧರಾಮ ಜಂಬಲದಿನ್ನಿ, ಕಮತಗಿಯ ಗದಿಗೆಪ್ಪ, ಗವಾಯಿ, ಶಂಕರರಾವ ದೀಕ್ಷಿತ, ಸದಾಶಿವಯ್ಯ



ಹಾಲಿಗಿಮರುಳ, ಅನ್ನದಾನಯ್ಯ ಹಿರೇಮಠ, ಪಂಚಾಕ್ಷರ ಮತ್ತಿಗಟ್ಟಿ, ಅರ್ಜುನಸಾ ನಾಕೋಡ, ಶೇಷಾದ್ರಿ ಗವಾಯಿ, ಪುರಾಣಿಕತ್ರಯರು (ಮೃತ್ಯುಂಜಯ, ಚಂದ್ರಶೇಖರ, ಬಸವರಾಜ), ಲಕಮಾಪುರದ ಜಯದೇವ ಗವಾಯಿ ಹೀಗೆ ಅನೇಕರು ಒಂದೊಂದು ಕಲೆಯಲ್ಲಿ ಪರಿಣತಿಯನ್ನು ಸಾಧಿಸಿದ್ದಾರೆ.

ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ಬಲವಾದ ವಿಶ್ವಾಸವನ್ನು ಹೊಂದಿದ್ದ ಪಂಡಿತ ಪಂಚಾಕ್ಷರಿ ಗವಾಯಿಗಳು ತಮ್ಮ ಗುರುಕುಲದಲ್ಲಿಯ ಯೋಗ್ಯ ವಿದ್ಯಾರ್ಥಿಗಳಲ್ಲಿ ಕೆಲವರನ್ನು ಆಯುರ್ವೇದ ಅಭ್ಯಾಸಕ್ಕಾಗಿಯೇ ಆಯ್ಕೆ ಮಾಡಿ ಕಳುಹಿಸಿದ್ದಾರೆ. ಅಂಥಹ ವಿದ್ಯಾರ್ಥಿಗಳಿಗೆ ಧನ ಸಹಾಯವನ್ನೂ ಮಾಡಿದ್ದಾರೆ. ಹೀಗೆ ತಮ್ಮ ಶಿಷ್ಯರಲ್ಲಿ ಅನೇಕರನ್ನು ಆಯುರ್ವೇದ ತಜ್ಞರನ್ನಾಗಿ ಮಾಡಿದ್ದಾರೆ. ಸಂಗೀತ ಕ್ಷೇತ್ರದಲ್ಲಿಯ ತಮ್ಮ ವಿಶಿಷ್ಟವಾದ ಸಾಧನೆಯಿಂದ ಪಂಡಿತ ಪಂಚಾಕ್ಷರಿ ಗವಾಯಿಗಳು ಹಲವು ಹತ್ತು ಬಿರುದುಗಳನ್ನು ಪಡೆದಿದ್ದಾರೆ. ಉಭಯಗಾನ ವಿಶಾರದ, ಸಂಗೀತ ರತ್ನ, ಸಂಗೀತ ಸಾಮ್ರಾಟ, ಲಲಿತ ಕಲಾ ಪಿತಾಮಹ, ಗಾನಯೋಗಿ, ಭೂಗಂಧರ್ವಚಂದ್ರ, ಗಾನ ಕಲಾನಿಧಿ, ಸಂಗೀತ ಸಾಗರ, ಸಂಗೀತ ಸುಧಾನಿಧಿ, ಗಾಯನಾಚಾರ್ಯ, ಉಭಯಗಾಯನಾಚಾರ್ಯ ಮೊದಲಾದವುಗಳು ಅವರಿಗೆ ಸಂದ ಬಿರುದುಗಳಾಗಿವೆ.

ಬಿಡುವಿಲ್ಲದ ದುಡಿತ, ದೇಹ ದಂಡನೆ, ಎಡೆಬಿಡದ ಪುರಾಣ ಪ್ರವಚನ, ಶಿವಾನುಭವ ಪ್ರವಚನ, ಶಿವಕೀರ್ತನೆ, ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವುದು - ಹೀಗೆ ಗವಾಯಿಗಳಿಗೆ ವಿಶ್ರಾಂತಿಯೇ ಇರಲಿಲ್ಲ. ಆಜೀವಪರ್ಯಂತ ನಿರಂತರ ದುಡಿಮೆಯಿಂದಾಗಿ ಕೊನೆಯ ದಿನಗಳಲ್ಲಿ ಅವರ ಆರೋಗ್ಯ ಕೆಟ್ಟಿತು. ಉದರ ರೋಗ ಕಾಣಿಸಿಕೊಂಡಿತು. ಆರೋಗ್ಯ ಕೆಟ್ಟಾಗಲೂ ಅವರು ತಮ್ಮ ದಿನಚರಿಯನ್ನು ಬಿಡಲಿಲ್ಲ. ಸೂಜಿಮದ್ದಿನ ಚಿಕಿತ್ಸೆಯನ್ನು ಪಡೆದುಕೊಳ್ಳಲು ನಿರಾಕರಿಸಿದರು. ಶಸ್ತ್ರಚಿಕಿತ್ಸೆಗೆ ಅವರನ್ನು ಒಪ್ಪಿಸುವಾಗಲೇ ಕಾಲ ಮಿಂಚಿತ್ತು. ೧೯೪೪ರ (ಜೇಷ್ಠ ಬಹುಳ ಪಂಚಮಿ)ಜೂನ್ ೧೧ರಂದು ಕಾಯಕನಿರತ ಪಂಚಾಕ್ಷರಿ ಗವಾಯಿಗಳು ಲಿಂಗ ಪೂಜೆಯಲ್ಲಿ ತೊಡಗಿರುವಾಗಲೇ ತಮ್ಮ ಅಂತಿಮ ಶ್ವಾಸವನ್ನು ಬಿಟ್ಟು ಅಮರರಾದರು.

**FOR ALL YOUR DOMESTIC**
**AND INTERNATIONAL**
**TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIRLINES &**
**JET AIRLINES**

**ALSO AT :**
2/16, KABBUR HOUSE,
SION (E), MUMBAI-400 022.
PHONES : 2407 2984
2409 3573/2407 7750



# ಡಾ. ಪುಟ್ಟರಾಜ ಗವಾಯಿ


ಆರ್. ವಿ. ಶೇಷಾದ್ರಿ ಗವಾಯಿ

ಪೂಜ್ಯ ಗುರುವರ್ಯ ಗಾನಯೋಗಿ-ಶಿವಯೋಗಿ ಡಾ. ಪುಟ್ಟರಾಜ ಗವಾಯಿಗಳವರು ೧೯೧೪ ಮಾರ್ಚ್ ೩ರಂದು ಧಾರವಾಡ ಜಿಲ್ಲೆಯ ಕರ್ಜಗಿಯ ಹತ್ತಿರದ ದೇವಗಿರಿ ಎಂಬ ಹಳ್ಳಿಯಲ್ಲಿ ಜನ್ಮ ತಾಳಿದರು. ಇವರು ಕಲಾಪ್ರಪಂಚಕ್ಕೆ ಅತ್ಯಮೂಲ್ಯ ಅನರ್ಘ್ಯ ರತ್ನ ವಾಗಿದ್ದಾರೆ.

ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಪುಟ್ಟರಾಜ ಸೋದರಮಾವಂದಿರಾದ ಶ್ರೀ ಚಂದ್ರಶೇಖರಯ್ಯನವರ ಪೋಷಣೆಯಲ್ಲಿ ಬೆಳೆದರು. ಹುಟ್ಟುವಾಗ ಹುಡುಗನಿಗೆ ಕಣ್ಣುಗಳೆರಡೂ ಕಾಣುತ್ತಿದ್ದರೂ ಬಾಲ್ಯದಲ್ಲಿ ಸಿಡುಬಿನ ಬಾಯಿಲೆ ಬಂದು ಕಣ್ಣುಗಳು ಕಾಣದಂತಾಗಲು, ತಾಯಿಗೆ ಮತ್ತು ಮಾವನಿಗೆ ಆದ ದುಃಖ ವರ್ಣಿಸಲಾಗದ್ದು. ಅಂದು ಅವರಿಗೇನು ಗೊತ್ತು 'ಪುಟ್ಟರಾಜ ಜನಿಸಿ ಬಂದ, ಕಾವ್ಯ ನಾಟ್ಯ ಗಾನದಿಂದ ಜಗವ ಬೆಳಕ ಮಾಡಬಂದ' ಎಂದು ಜನರು ಮುಂದೆ ಹಾಡುವರೆಂದು! ಹೀಗೆ ದಿನ ಕಳೆದಂತೆ ದುಃಖಿಸಿ ಫಲವಿಲ್ಲವೆಂದು ಚಂದ್ರಶೇಖರಯ್ಯನವರು ಅಳಿಯ ಪುಟ್ಟಯ್ಯನಿಗೆ ಸಂಗೀತ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಶ್ರೀ ಚಂದ್ರಶೇಖರಯ್ಯನವರು ಗುರುವರ್ಯ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಶಿಷ್ಯರಾಗಿದ್ದವರು. ಅನಂತರ ಪ್ರಾರಂಭಿಕ ವಿದ್ಯಾಭ್ಯಾಸ ಮುಗಿಯುವುದರಲ್ಲೇ ದೇವಗಿರಿಗೆ ಭಿಕ್ಷಕ್ಕೆ ದಯಮಾಡಿಸಿದ ಶ್ರೀ ಪಂಚಾಕ್ಷರಿ ಗವಾಯಿಗಳವರು ಬಾಲಕ ಪುಟ್ಟಯ್ಯನನ್ನು ನೋಡಿ, ಆತನ ಸಂಗೀತ ವಿದ್ಯಾಚತುರತೆಯನ್ನು ಮನಗಂಡು ಪುಟ್ಟರಾಜರ ತಾಯಿ ಮತ್ತು ಮಾವನವರ ಒಪ್ಪಿಗೆ ಮೇರೆಗೆ ಬಾಲಕ ಪುಟ್ಟಯ್ಯನನ್ನು ತಮ್ಮ ನೆಚ್ಚಿನ ಶಿಷ್ಯಮಾಲೆಯಲ್ಲಿ ಸೇರಿಸಿಕೊಂಡರು. ಪುಟ್ಟಯ್ಯನನ್ನು ಗುರುಗಳಿಗೆ ಒಪ್ಪಿಸುವಾಗ "ಗುರುದೇವಾ ಈ ಕಣ್ಣಿಲ್ಲದ ಕಂದನನ್ನು ನಿನ್ನ ಚರಣಗಳಿಗೆ ಒಪ್ಪಿಸಿದ್ದೇವೆ. ಇವನು ನೇತ್ರಹೀನನಾಗಿರುವುದು ನಮಗೆ ಕಳವಳವಾಗಿದೆ. ಇದೆಲ್ಲವನ್ನೂ ಸರಿಪಡಿಸಲು ನಿಮ್ಮ ವಿನಃ ಬೇರಿಲ್ಲ. ಈ ಮಗುವಿನ ಮೇಲೆ ಕೃಪೆ ಮಾಡಬೇಕು" ಎಂದು ಪುಟ್ಟರಾಜರ ಮಾವ ಮತ್ತು ತಾಯಿಯವರು ಕಣ್ಣೀರು ಸುರಿಸಿ ಗುರುವರ್ಯ ಶ್ರೀ ಪಂಚಾಕ್ಷರ ಗವಾಯಿಗಳಿಗೆ ನಮಸ್ಕರಿಸಿದರು. ಪಂಚಾಕ್ಷರ ಗವಾಯಿಗಳು ಇವರ ಮಾತಿಗೆ ನಕ್ಕು "ನೀವೇನೂ ಚಿಂತಿಸಬೇಕಾಗಿಲ್ಲ, ಇವನ ಮೇಲೆ ಕುಮಾರೇಶ್ವರನ ಕೃಪೆ ಸಂಪೂರ್ಣವಾಗಿದೆ. ಈತನು ತನ್ನ ಜೀವನವನ್ನು ಸುಗಮವಾಗಿ ಮಾಡಿಕೊಳ್ಳುವುದರೊಂದಿಗೆ ಜಗತ್ತಿನ ಸಹಸ್ರಾರು ಜನರ ಜೀವನದ ನಿರ್ವಹಣೆಗೆ ಕಾರಣೀಭೂತನಾಗುವಂತಹ ಭಾಗ್ಯಶಾಲಿಯಾಗಿದ್ದಾನೆ. ಇವನಿಂದ ಕರ್ನಾಟಕದ ಕಲೆ ಜೀರ್ಣೋದ್ಧಾರವಾಗಬೇಕಾಗಿದೆ" ಎಂದು ಹೇಳಿ ಅವರನ್ನು ಹರಸಿ ಪುಟ್ಟರಾಜರೊಡನೆ ಗವಾಯಿಗಳು ಅಲ್ಲಿಂದ ಹೊರಟರು.

ತರುವಾಯ ಪುಟ್ಟರಾಜರು ಗುರುಗಳ ಪೂರ್ಣ ಕೃಪೆಗೆ ಪಾತ್ರನಾಗಿ ಸಂಗೀತ ಸಾಹಿತ್ಯಗಳಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿಕೊಂಡುದ್ದಲ್ಲದೇ, ಪಂಚಾಕ್ಷರಿ ಗವಾಯಿಗಳವರಂತೆ ಬ್ರಹ್ಮಚರ್ಯ, ಆಚಾರ, ನೇಮನಿಷ್ಠೆಗಳಲ್ಲಿ ಶ್ರದ್ಧೆ ವಹಿಸಿ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಚಾಚೂ ತಪ್ಪದಂತೆ ನಡೆದು ಹಲವಾರು ಕುಟುಂಬಗಳಿಗೆ ಮಾರ್ಗದರ್ಶಕರಾಗಿ ಕರ್ನಾಟಕದ ಕಲಾಪಿಪಾಸು ಬಡಮಕ್ಕಳ ಕಾಮಧೇನುವಾಗಿದ್ದಾರೆ. ಸಂಗೀತ, ಸಾಹಿತ್ಯ ಕಲಾ ಮಹಾವಿಶಾರದ, ಉಭಯ ಗಾಯನಾಚಾರ್ಯ, ತ್ರಿಭಾಷಾ ಕವಿ, ಡಾ. ಪುಟ್ಟರಾಜ ಗವಾಯಿಗಳು ಪಂಚಾಕ್ಷರಿ ಗವಾಯಿಗಳಂತೆ ಕುರುಡು ಮಕ್ಕಳಿಗೆ ಅನ್ನ-ವಸ್ತ್ರ-ವಸತಿಗಳನ್ನಿತ್ತು, ಸಂಗೀತ, ನಾಟಕ ಇತ್ಯಾದಿ ಕಲೆಗಳಲ್ಲಿ ಜಾತಿ-ಕುಲಗಳ ಭೇದವನ್ನೆಣಿಸದೆ ಕೇವಲ ನೀತಿಗೇನೇ ಬೆಲೆ ಕೊಟ್ಟು ವಿದ್ಯಾದಾನ ಮಾಡುತ್ತಾ ಪಂಚಾಕ್ಷರ ಗವಾಯಿಗಳಿಂದ ಸ್ಥಾಪಿತವಾದ ಶ್ರೀ ಕುಮಾರೇಶ್ವರ ಕೃಪಾಪೋಷಿತ ಧರ್ಮಾರ್ಥ ಸಂಚಾರಕ ಸಂಗೀತ ಮಹಾವಿದ್ಯಾಲಯ ಹಾಗೂ ಗದಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮ ಇವುಗಳ ಕುಲಪತಿಗಳಾಗಿ ಕನ್ನಡತಾಯಿಯ ಸತ್ಪುತ್ರರಾಗಿದ್ದಾರೆ. ಇಂದು ಪುಣ್ಯಾಶ್ರಮದಲ್ಲಿ ೪೫೦ ವಿದ್ಯಾರ್ಥಿಗಳಿರುವರು. ಅವರಲ್ಲಿ ೧೫೦ ಅಂಧರು, ೭೫ ಅಂಗವಿಕಲರು ಇದ್ದಾರೆ.

ಒಮ್ಮೆ ಗವಾಯಿಗಳ ನಾಟಕ ಸಂಸ್ಥೆ ಕೊಪ್ಪಳದಲ್ಲಿ ಮೊಕ್ಕಾಂ ಮಾಡಿತ್ತು. ಆಗ ಸದಾಶಿವರಾವ ಗರೂಡರು 'ಸತ್ಯ ಸಂಕಲ್ಪ' ನಾಟಕವನ್ನು ಹೊಸದಾಗಿ ಅಭ್ಯಾಸ ಮಾಡಿ ಆಡಬೇಕಿತ್ತು. ಆ ನಾಟಕದ ಉದ್ಘಾಟನೆಯಂದು ಗರುಡರು ಹಮ್ಮಿಗಿ ನೀಲಕಂಠಪ್ಪನವರು ಮತ್ತು ತಮ್ಮೆಲ್ಲ ವಿದ್ಯಾರ್ಥಿಗಳೊಡನೆ ಪಾತ್ರವಹಿಸಿದ್ದರು. ಆಗ್ಗೆ ಪಂಚಾಕ್ಷರಿ ಗವಾಯಿಗಳವರು ಸಂಸ್ಥೆಯ ಭಾರವನ್ನು ಪುಟ್ಟರಾಜರಿಗೆ ಒಪ್ಪಿಸಿ ತಾವು ಗದಗಿನಲ್ಲಿ ಅನುಷ್ಠಾನಕ್ಕೆ ಕುಳಿತು ನಿಶ್ಚಿಂತೆಯಿಂದ ಇದ್ದವರು ಆ ದಿನ ತಾವೂ ಸಹ ಈ ಹೊಸ ನಾಟಕವನ್ನು ನೋಡಲು ಗದಗಿನಿಂದ ಕೊಪ್ಪಳಕ್ಕೆ ಬಂದಿದ್ದರು. ಜನಗಳ ಒತ್ತಾಯದ ಮೇರೆಗೆ ನಾಟಕದ ಮಧ್ಯೆ ಪುಟ್ಟರಾಜರ ಹಾರ್ಮೋನಿಯಂ, ಶ್ರೀ ಪಂಚಾಕ್ಷರಿ ಗವಾಯಿಗಳ ತಬಲಾ ವಾದನ ಶ್ರೋತೃಗಳನ್ನು ಆನಂದಪರವಶರಾಗುವಂತೆ ಮಾಡಿ ಮೈಮರೆಸಿತು. ಅರ್ಧ ಘಂಟೆ ಮಾತ್ರ ನಾಟಕದ ಮಧ್ಯೆ ಕಾರ್ಯಕ್ರಮ



ಸಾಕೆಂದು ನಿಶ್ಚಯಿಸಲಾಗಿತ್ತು. ಆದರೆ ಆ ಕಾರ್ಯಕ್ರಮದಲ್ಲಿ ಒಂದೇ ರಾಗ ಎರಡು ಗಂಟೆ ಕಾಲ ನುಡಿಸಿದರು. ಪಂಚಾಕ್ಷರಿ ಗವಾಯಿಗಳಂತೂ ತಬಲಾ ಬಾರಿಸುತ್ತಾ ಹಾರ್ಮೋನಿಯಂ ವಾದ್ಯ ಕೇಳಿ, ಕುಳಿತೇ ಕುಣಿಯುತ್ತಿದ್ದರು. ಗುರುಶಿಷ್ಯರ ಆ ಕಾರ್ಯಕ್ರಮ ನಾನಂದು ಕೇಳದಿದ್ದರೆ ಮುಂದೆ ಎಂದೂ ಅಂಥ ಅವಕಾಶ ಸಿಕ್ಕುತ್ತಿರಲಿಲ್ಲ. ಅದೆಂಥ ಸುಯೋಗ! ಕೊನೆಗೆ ಶ್ರೋತೃಗಳು ಪುಟ್ಟರಾಜರ ಬಳಿ ತಮ್ಮ ಆತ್ಮಾನಂದವನ್ನು ತಡೆಯದೆ ಧನ್ಯವಾದಗಳನ್ನರ್ಪಿಸಲು ಬಂದಾಗ ಅವರು "ಈಗ ನಾನು ನುಡಿಸಿದ್ದರಲ್ಲಿ ನನ್ನದೇನಿಲ್ಲ. ಇದೆಲ್ಲಾ ನಮ್ಮೆಲ್ಲರಿಗೆ ಪರಮಗುರುವಾಗಿರುವ ಶ್ರೀ ಪಂಚಾಕ್ಷರಿ ಗವಾಯಿಗಳವರ ಕೃಪೆ" ಎಂದು ನಿರಹಂಕಾರದಿಂದ ಹೇಳಿದ ಸರ್ವಾರ್ಪಣ ಬುದ್ಧಿಯ ಉದ್ಗಾರವನ್ನು ಕೇಳಿ ಜನ ಬೆರಗಾದರು. ಪುಟ್ಟರಾಜರ ಗವಾಯಿಗಳವರಿಗೆ ಹಿಂದಿ ಭಾಷೆಯಲ್ಲಿ ಅತ್ಯದ್ಭುತ ಕವಿತಾ ಸಾಮರ್ಥ್ಯವಿತ್ತು. ಇವರು ಗದ್ಯ ಸಾಹಿತ್ಯವನ್ನು ಬರೆಯುವುದು ಮಾತ್ರವಲ್ಲದೇ ಹಿಂದಿಯಲ್ಲಿ ಅನೇಕ ಉತ್ತಮ ಚೀಜುಗಳನ್ನು ರಚಿಸಿ ಸಂಗೀತ ಪ್ರಪಂಚಕ್ಕೆ ಮಹೋನ್ನತ ಸೇವೆ ಸಲ್ಲಿಸುತ್ತಿದ್ದಾರೆ. ಇವರು ರಚಿಸಿದ ಅನೇಕ ಚೀಜುಗಳು ಬಳಕೆಯಲ್ಲಿರುವುದಲ್ಲದೆ ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಅವರ ಶಿಷ್ಯ-ಪ್ರಶಿಷ್ಯರಿಂದ ಪ್ರಸಾರವಾಗಿದೆ. 'ಕಿಶೋರ' ಎಂಬ ಅಂಕಿತದಲ್ಲಿ ಇವರು ಚೀಜುಗಳನ್ನು ರಚಿಸಿದ್ದಾರೆ. ಈ ರೀತಿ ಇವರು ಕೇವಲ ಸಂಗೀತ ವಿದ್ವಾಂಸರಾಗಿರದೆ ವಾಗ್ಗೇಯಕಾರರೂ ಆಗಿರುವುದು ತುಂಬಾ ಹೆಮ್ಮೆಯ ಮಾತಾಗಿದೆ.

ಆದರೆ ನಮ್ಮ ಜನ ಹಿತ್ತಲ ಗಿಡ ಮದ್ದಲ್ಲ ಎಂಬ ನಾಣ್ಣುಡಿಗೆ ಅನ್ವರ್ಥವಾಗಿದ್ದಾರೆ. ನಮ್ಮವರು ಎಷ್ಟೇ ದೊಡ್ಡವರಾಗಿರಲಿ, ಪ್ರತಿಭಾವಂತರಾಗಿರಲಿ, ಅವರಿಗೆ ಗೌರವ ತೋರಿಸಬೇಕೆಂದರೆ ಖಂಡಿತ ಮನಸ್ಸು ಬರುವುದಿಲ್ಲ. ಬೇರೆ ರಾಜ್ಯದವರ/ದೇಶದವರ ಸಾಹಿತ್ಯ ಕಲೆ ಇತ್ಯಾದಿಗಳು ಯಾವ ಮಟ್ಟದ್ದಲ್ಲಿದರೂ ಆ ಹಳಸಿದ ಅನ್ನವೇ ಅವರಿಗೆ ಅಮೃತ. ಆದರೆ ಪುಟ್ಟರಾಜರಿಗೆ ಯಾರ ಹೊಗಳಿಕೆ-ತೆಗಳಿಕೆಗಳೂ ಅನಗತ್ಯ. ಅವರು ಮಾಡುತ್ತಿರುವ ಕಲಾಸೇವೆಗೆ ಅವರಿಗೆ ಯಾವ ಪ್ರಶಸ್ತಿ-ಗೌರವ ಕೊಟ್ಟರೂ ಕಮ್ಮಿಯೇ ಸರಿ. ಅವರು ಮನಸ್ಸನ್ನು ಪ್ರತಿಯೊಂದರಲ್ಲೂ ಸಾಕ್ಷಿಯಾಗಿರಿಸಿಕೊಂಡು ಮನವೊಪ್ಪುವಂತೆ ಕಲಾಸೇವೆ ಮಾಡಿ ಇಹ-ಪರಗಳೆರಡಕ್ಕೂ ತಮ್ಮ ಜೀವನವನ್ನು ಜಗತ್ತಿಗೆ ಮಾದರಿಯಾಗುವಂತೆ ಕಲೆಯ ನೆಲೆಯೇ ಆತ್ಮದ ಅರಿವು ಎಂಬ ನಾಣ್ಣುಡಿಯನ್ನು ಸತ್ಯ ಮಾಡಿ ತೋರಿಸಿದ್ದಾರೆ.

ಒಮ್ಮೆ ಗವಾಯಿಗಳ ಶಾಲೆಯ ಮೊಕ್ಕಾಂ ಹೊಸಪೇಟೆಯಲ್ಲಿತ್ತು. ಆಗ ಅಲ್ಲಿನ ಶ್ರೀಮಂತರೊಬ್ಬರು ಪುಟ್ಟರಾಜ ಗವಾಯಿಗಳವರ ಗಾಯನವನ್ನೇರ್ಪಡಿಸಿದ್ದರು. ಕಾರ್ಯಕ್ರಮವು ಸಾರ್ವಜನಿಕರಿಗೆ ಸಂಬಂಧಿಸಿದ ವಿಶಾಲ ಕಟ್ಟಡ ಒಂದರಲ್ಲಿ ನಡೆಯಿತು. ಕಾರ್ಯಕ್ರಮ ಪ್ರಾರಂಭವಾಗುವ ಸ್ವಲ್ಪ ಮುಂಚೆ ಕಾರ್ಯಕ್ರಮವೇರ್ಪಡಿಸಿದ ಶ್ರೀಮಂತನನ್ನು ಕರೆದು ಗವಾಯಿಗಳು ನಿಮ್ಮ ತಾಯಿಯವರು ನಮ್ಮ ಕೀರ್ತನೆ, ಗಾಯನಗಳಿಗೆ ಎಂದೂ ಬರಲು ತಪ್ಪಿದವರಲ್ಲ, ಇಂದೇಕೆ ಬರಲಿಲ್ಲ ಎಂದು ವಿಚಾರಿಸಿದರು. ಆಗ ಶ್ರೀಮಂತನು "ಗುರುದೇವಾ, ನನ್ನ ತಾಯಿಗೆ ತುಂಬಾ ವಯಸ್ಸಾಯಿತು, ಎದ್ದು ಕೂಡುವುದೇ ಇಲ್ಲ. ಸಾಲುದದಕ್ಕೆ ತುಂಬಾ ಖಾಯಿಲೆಯಾಗಿ ಹಾಸಿಗೆ ಹಿಡಿದಿದ್ದಾಳೆ. ಈ ದಿನ ನಿಮ್ಮ ಕಾರ್ಯಕ್ರಮ ಕೇಳಿ ತಮ್ಮ ದಿವ್ಯ ದರ್ಶನಲಾಭ ಪಡೆಯಲಾಗದೆ ಇರುವುದಕ್ಕೆ ವ್ಯಥೆ ಪಟ್ಟಳು" ಎಂದು ಹೇಳಿದ. ಶ್ರೀಮಂತನ ಮಾತಿಗೆ ಗವಾಯಿಗಳು ನಕ್ಕು "ನೀನೇನು ಚಿಂತಿಸಬೇಡ! ಗುರುದೇವನು ಸರ್ವರ ಸತ್ಕಾಮನೆಗಳನ್ನೂ ಈಡೇರಿಸುವನು" ಎಂದು ಹೇಳಿ ಗಾಯನವನ್ನು ಪ್ರಾರಂಭಿಸಿ ಎಲ್ಲರನ್ನೂ ಸಂತೋಷಗೊಳಿಸಿದ ಮೇಲೆ ಮಂಗಲ ಹಾಡಿದರು. ಕೊನೆಯಲ್ಲಿ ಶ್ರೀಮಂತನ ಆತಿಥ್ಯ ತಾಂಬೂಲ ದಕ್ಷಿಣೆಯನ್ನು ಸ್ವೀಕರಿಸಿ ಅಲ್ಲಿಂದ ತಮ್ಮ ಬಿಡಾರದ ಕಡೆಗೆ ಶಿಷ್ಯರೊಡಗೂಡಿ ಹೊರಟರು. ಶ್ರೀಮಂತನು ಗುರುಗಳು ಹೊರಟುಹೋದನಂತರ ತನ್ನ-ಮಿತ್ರರೊಡನೆ ಹರಟೆಹೊಡೆದು ಅಲ್ಲಲ್ಲಿ ಸುತ್ತಾಡಿ ಒಂದು ತಾಸಿನ ನಂತರ ಮನೆಗೆ ಬಂದಾಗ, ಪುಟ್ಟರಾಜರು ಕಾರ್ಯಕ್ರಮವನ್ನು ತೀರಿಸಿಕೊಂಡು, ನೇರವಾಗಿ ತನ್ನ ಮನೆಗೆ ಬಂದು ಒಂದು ಘಂಟೆ ಕಾಲ ಶ್ರೀಮಂತನ ತಾಯಿಗೆ ಸಂಗೀತ ಕೇಳಿಸಿ ಆಕೆಗೆ ಆಶೀರ್ವದಿಸಿ ಕೇವಲ ಒಂದು ನಿಮಿಷ ಮುಂಚೆ ಹೊರಟುಹೋದ ಸುದ್ದಿ ಕೇಳಿ ಅವಾಕ್ಕಾಗಿ, ಹತ್ತು ನಿಮಿಷ ಶಿಲೆಯಂತೆ ನಿಂತುಬಿಟ್ಟ.

ಶ್ರೀ ಪುಟ್ಟರಾಜ ಗವಾಯಿಗಳು ಅನೇಕ ವಾದ್ಯಗಳಲ್ಲಿ ಪಾಂಡಿತ್ಯ ಪಡೆದಿದ್ದಾರೆ. ಹಾಗೂ ಅನೇಕರನ್ನು ವಿವಿಧ ವಾದ್ಯಗಳಲ್ಲಿ ತಯಾರು ಮಾಡಿದ್ದಾರೆ. ಇವರಲ್ಲಿ ತಯಾರಾದ ಅನೇಕ ವಾದ್ಯವಾದನ ಪಟುಗಳು ಭಾರತದ ನಾನಾ ಮೂಲೆಗಳಲ್ಲಿ ಕೀರ್ತಿಶವಂತರಾಗಿ ಜೀವನ ನಿರ್ವಹಣೆ ಮೂಡುತ್ತಿದ್ದಾರೆ. ತಬಲಾ, ಸಾರಂಗಿ, ಪಿಟೀಲು, ಹಾರ್ಮೋನಿಯಂ, ಶಹನಾಯಿ, ಸಿತಾರ್, ದಿಲ್‌ರುಬಾ, ಮೃದಂಗ, ಕೊಳಲು ಇತ್ಯಾದಿ ವಾದ್ಯಗಳಲ್ಲಿ ಪ್ರಾವೀಣ್ಯತೆ ಪಡೆದ ಇವರ ಶಿಷ್ಯರನ್ನು ನೋಡಿ ಅನೇಕ ದೊಡ್ಡ ದೊಡ್ಡ ವಿದ್ವಾಂಸರು ಕಣ್ಣಿಲ್ಲದವರೊಬ್ಬರು ಇಷ್ಟೆಲ್ಲಾ ವಿವಿಧ ವಾದ್ಯಗಳಲ್ಲಿ ಶಿಷ್ಯರನ್ನು ತಯಾರು ಮಾಡಿರುವುದರ ಬಗ್ಗೆ ಆಶ್ಚರ್ಯ ಪಟ್ಟು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಹಿಂದೆ ಭಾರತದ ಸುಪ್ರಸಿದ್ಧ ಶಹನಾಯಿ ವಾದಕರಾದ ಉಸ್ತಾದ್ ಬಿಸ್ಮಿಲ್ಲಾಖಾನ್‌ರ ಕಾರ್ಯಕ್ರಮವು ಗದಗಿನಲ್ಲಿ ಪುಟ್ಟರಾಜ ಗವಾಯಿಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. ನಂತರ ಖಾನರನ್ನು ಗವಾಯಿಗಳವರು ತಮ್ಮ ಶಾಲೆಗೆ ಆಹ್ವಾನಿಸಿ ತಮ್ಮ ಶಿಷ್ಯ ಗಜೇಂದ್ರಗಡರವರಿಂದ ಶಹನಾಯಿ ವಾದನವನ್ನು ಖಾನರಿಗೆ ಕೇಳಿಸಿದರು. ಖಾನರು ಗಜೇಂದ್ರಗಡರವರ ಶಹನಾಯಿ ವಾದನವನ್ನು ಕೇಳಿ ಸಂತೋಷಭರಿತರಾಗಿ ಪುಟ್ಟರಾಜಗವಾಯಿಗಳನ್ನು ತುಂಬಾ ಹೊಗಳಿದರು. ಇಂತಹ ರಸ ನಿಮಿಷಗಳು ಗವಾಯಿಗಳ ಜೀವನದಲ್ಲಿ ಸಾವಿರಾರು. ಆದರೂ ಗವಾಯಿಗಳಿಗೆ ಮಾತ್ರ ಹೊಗಳಿದರೂ ಸಂತೋಷ. ಇಲ್ಲದಿದ್ದರೂ ಸಂತೋಷ, ಸೇವೆ ಮನುಷ್ಯನ ಧರ್ಮ. ನನ್ನ ಸಹಜ ಧರ್ಮವನ್ನು ನಾನು ಪಾಲಿಸಿದರೆ ಅದಕ್ಕೆ ಹೊಗಳಿಕೆ ಅಗತ್ಯವಿಲ್ಲವೆಂದೇ ಅವರ ದೃಢ ನಂಬಿಕೆ. ಅವರೊಬ್ಬ ಶಿವಾಂಶಸಂಭೂತರೆಂದರೆ ಅತಿಶಯೋಕ್ತಿಯಲ್ಲ.



ಶ್ರೀ ಪುಟ್ಟರಾಜ ಗವಾಯಿಗಳ ಶ್ರೀ ಬಸವೇಶ್ವರ ಪುರಾಣವನ್ನು ನೋಡಿ ಭಾರತದ ಅಂದಿನ ರಾಷ್ಟ್ರಪತಿಗಳಾಗಿದ್ದ ಬಾಬು ರಾಜೇಂದ್ರಪ್ರಸಾದರು ತಮ್ಮ ಹೃತ್ಪೂರ್ವಕ ಮೆಚ್ಚುಗೆಯನ್ನು ವ್ಯಕ್ತಪಡಿಸಿ ದೆಹಲಿಯ ತಮ್ಮ ರಾಷ್ಟ್ರ ಭವನದಲ್ಲಿ ಪುಟ್ಟರಾಜರನ್ನು ಸತ್ಕರಿಸಿದರೆಂದ ಮೇಲೆ ಅವರ ಆ ಮಹಾಕೃತಿ ಶ್ರೀ ಬಸವೇಶ್ವರ ಪುರಾಣದ ಬಗ್ಗೆ ಹೆಚ್ಚಿಗೆ ಹೇಳುವುದು ಅನಗತ್ಯ. ಇತ್ತೀಚಿನ ವರ್ಷಗಳಲ್ಲಿ ಪುಟ್ಟರಾಜ ಗವಾಯಿಗಳು ವಿದ್ಯಾಲಯದ ಗೌರವವನ್ನು ಸಾರುವ ಸದುದ್ದೇಶ್ಯದಿಂದ ಇಡೀ ಭಾರತದಲ್ಲಿ ಸಂಚರಿಸಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಹಿಂದೆ ಮೈಸೂರಿನ ಮಹಾರಾಜರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ ಆಹ್ವಾನದ ಮೇರೆಗೆ ಅರಮನೆಯಲ್ಲಿ ಉಭಯ ಪದ್ಧತಿಯ ಸಂಗೀತವನ್ನು ನಡೆಸಿ ಮಹಾರಾಜರ ಕೃಪೆಗೆ ಪಾತ್ರರಾಗಿದ್ದಾರೆ. ೧೯೬೨ರಲ್ಲಿ ಆಗಿನ ಮೈಸೂರು ಸಂಗೀತ ನಾಟಕ ಅಕಾಡೆಮಿಯು ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಇವರು ಬರೆದ ಅಕ್ಕಮಹಾದೇವಿ ಪುರಾಣದ ಬಗ್ಗೆ ಕರ್ನಾಟಕದ ಕವಿಪುಂಗವರಾದ ಬಳ್ಳಾರಿಯ ಪಂ. ಮೈ. ನಾಗೇಶ ಶಾಸ್ತ್ರಿಗಳು "ಇವರು ಬರೆದ ಈ ಪುರಾಣದಲ್ಲಿ ಅಕ್ಕನವರ ಚಿತ್ರವು ಹೃದಯಂಗಮವಾಗಿ ಪ್ರಕಾಶಿಸುವುದು. ಕವಿಗಳು ಚರ್ಮಚಕ್ಷುರಹಿತರಾಗಿದ್ದರೂ ಶ್ರೇಷ್ಠತಮವಾದ ಜ್ಞಾನ ಚಕ್ಷುವಿನಿಂದ ಬೆಳಗುತ್ತಿರುವವರೆಂಬುದು ಇದರ ಪುರಾಣವನ್ನು ಓದುವಾಗ ಅವಶ್ಯಕವಾಗಿ ಬೋಧೆಯಾಗಿರುವದೆಂದು ಭಾವಿಸುವೆವು" ಎಂದು ಹೇಳಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನವರು ಸಹಾ ಇವರು ಮಾಡಿರುವ ಸೇವೆಗೆ ಗೌರವ ಸೂಚಿಸುವ ಸಲುವಾಗಿ ಪರಿಷತ್ತಿನಲ್ಲಿ ಸನ್ಮಾನಿಸಿದ್ದಾರೆ.

ಒಮ್ಮೆ ಪುಟ್ಟರಾಜ ಗವಾಯಿಗಳು ಮೈಸೂರಿಗೆ ಆಸ್ಥಾನ ವಿದ್ವಾನ್ ಬಿ. ದೇವೇಂದ್ರಪ್ಪನವರು ನಡೆಸುವ ಶ್ರೀ ಹನುಮಜಯಂತಿಯ ಕಾರ್ಯಕ್ರಮಕ್ಕಾಗಿ ಆಹ್ವಾನಿತರಾಗಿದ್ದರು. ಅಂದು ನಾನು ಸಹ ಗವಾಯಿಗಳ ಕಾರ್ಯಕ್ರಮದಲ್ಲಿ ಕಿರಿದಾದ ಒಂದು ಸೇವೆ ಸಲ್ಲಿಸಲು ಅಲ್ಲಿಗೆ ಹೋಗಿದ್ದೆ. ಅಂದು ಅವರ ವಿದ್ವಾಪ್ರೌಢಿಮೆಯನ್ನು ಮನಗಾಣಲು ಮೈಸೂರು ಆಸ್ಥಾನ ವಿದ್ವಾಂಸರು, ಹಿರಿಯರು, ನಾಗರಿಕರು ಅಧಿಕ ಸಂಖ್ಯೆಯಲ್ಲಿ ನೆರೆದಿದ್ದರು. ಗವಾಯಿಗಳು ಅಂದಿನ ಶ್ರೀ ಹನುಮಜ್ಜಯಂತಿಯ ಅಂಗವಾಗಿ ಸಭೆಯಲ್ಲಿ ಕುಳಿತು ರಚಿಸಿ ಹಾಡಿದ ಸಂಸ್ಕೃತ ಪದ್ಯವೊಂದನ್ನು ಕೇಳಿ ಎಲ್ಲ ವಿದ್ವಾಂಸರು ತಲೆದೂಗಿದರು. ಇವರ ಸಂಗೀತ ಸಾಹಿತ್ಯ ಪ್ರೌಢಿಮೆ, ಆಚಾರ-ವಿಚಾರ-ನೇಮ ಇತ್ಯಾದಿಗಳನ್ನು ಮನಗಂಡ ಅನೇಕರು ಇವರ ದರ್ಶನವಾದದ್ದೇ ನಮಗೆ ಮಹದ್ಭಾಗ್ಯವೆಂದು ಹೊಗಳಿದರು. ಉತ್ತರ ಮತ್ತು ದಕ್ಷಿಣ ಸಂಗೀತಗಳ ತವರುಮನೆಯಾದ ಮೈಸೂರು ಶ್ರೀಮನ್ಮಹಾರಾಜರ ಅಧಿದೇವತೆಯಾದ ಶ್ರೀ ಚಾಮುಂಡೇಶ್ವರಿಯ ಸನ್ನಿಧಿಯಲ್ಲಿ ಕರ್ನಾಟಕ ರತ್ನ ಸಿಂಹಾಸನವನ್ನು ತಲೆಯಲ್ಲಿ ಹೊತ್ತು ನಿಂತು ಪ್ರಪಂಚಕ್ಕೆ ತನ್ನ ಹೆಸರನ್ನು ಮಾದರಿಯಾಗಿ ಮಾಡಿರುವ ಮೈಸೂರು ನಗರದಲ್ಲಿ ಗೌರವ ಮರ್ಯಾದೆಯನ್ನು ಸಂಪಾದಿಸಿದ ಪುಟ್ಟರಾಜ ಗವಾಯಿ ನಮ್ಮ ಕನ್ನಡನಾಡಿನವರೆಂದು ಹೇಳುವಾಗ ನಮಗಾಗುವ ಆನಂದ ವರ್ಣನಾತೀತ.

ಪರಮ ಪೂಜ್ಯ ಗುರುವರ್ಯ ಪುಟ್ಟರಾಜ ಗವಾಯಿಗಳವರಿಗೆ ಸುಮಾರು ೧೦೦೦ ತುಲಾಭಾರಗಳು ಈವರೆಗೆ ಸಂದಿವೆ. ಇದು ಯಾವ ಸಂಗೀತಗಾರರಿಗೂ ದೊರೆಯದ ಗೌರವ. ಡಾ. ಪುಟ್ಟರಾಜ ಗವಾಯಿಗಳು ಅನೇಕ ಶಿಷ್ಯರನ್ನು ತಯಾರು ಮಾಡಿದ್ದಾರೆ ಇವರಲ್ಲಿ ಎಂ. ವೆಂಕಟೇಶಕುಮಾರ ಮತ್ತು ಡಿ. ಕುಮಾರದಾಸ ತುಂಬಾ ಪ್ರಸಿದ್ಧ ಗಾಯಕರಾಗಿರುವರು.

ಡಾ. ಪುಟ್ಟರಾಜ ಗವಾಯಿಗಳಿಗೆ ಸಂದ ಪ್ರಶಸ್ತಿಗಳು ಹತ್ತು ಹಲವು : ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಅಂತರರಾಷ್ಟ್ರೀಯ ರೋಟರಿ ಸಂಸ್ಥೆಯ ಪಾಲ್‌ಹ್ಯಾರಿಸ್ ಪ್ರಶಸ್ತಿ, ಭಾರತ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಗೌರವ ಫೆಲೋಶಿಪ್, ಕರ್ನಾಟಕ ಸರಕಾರ ಸಂಗೀತ ಸಾಧನೆಗೆ ನೀಡುವ ಪ್ರತಿಷ್ಠಿತ ಕನಕ-ಪುರಂದರ ಪ್ರಶಸ್ತಿ, ಇವೆಲ್ಲಕ್ಕೆ ಕಳಸವಿಟ್ಟಂತೆ ಮೇ ೪, ೨೦೦೩ರಂದು ರಾಷ್ಟ್ರೀಯ ಬಸವ ಪುರಸ್ಕಾರ.

೧೯೯೪ರಲ್ಲಿ ಡಾ. ಪುಟ್ಟರಾಜ ಗವಾಯಿ ಪ್ರತಿಷ್ಠಾನ ಸ್ಥಾಪಿಸಿ ತನ್ಮೂಲಕ ಪ್ರತಿ ವರ್ಷ ಅಖಿಲ ಭಾರತ ಮಟ್ಟದ ಸಂಗೀತಗಾರರೊಬ್ಬರಿಗೆ ಪುಟ್ಟರಾಜ ಸಮ್ಮಾನ ನೀಡಲಾಗುತ್ತಿದೆ. ೧೯೯೯ರಲ್ಲಿ ಗ್ವಾಲಿಯರ್ ಘರಾಣೆಯ ಲಕ್ಷ್ಮಣ ಪಂಡಿತರಿಗೆ, ೨೦೦೦ದಲ್ಲಿ ಪಂಚಾಕ್ಷರಿ ಗವಾಯಿಗಳ ಹಿರಿಯ ಶಿಷ್ಯರಾದ ಮೃತ್ಯುಂಜಯಬುವಾ ಪುರಾಣಿಕ ಮಠರಿಗೆ, ೨೦೦೧ರಲ್ಲಿ ಆಗ್ರಾ ಘರಾಣೆಯ ದಿನಕರ ಕಾಯ್ಕಿಣಿ ೨೦೦೩ ರಲ್ಲಿ ಕರ್ನಾಟಕ ಗಾಯಕ ನಾದಬ್ರಹ್ಮ ಕುರುಡಿ ವೆಂಕಣ್ಣಾಚಾರ್ ಅವರಿಗೆ, ೨೦೦೫ ರಲ್ಲಿ ಜೈಪುರ ಘರಾಣೆಯ ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ ಅವರಿಗೆ ಪುಟ್ಟರಾಜ ಸಮ್ಮಾನ ನೀಡಲಾಗಿದೆ.





# ಡಾ. ಬಸವರಾಜ ರಾಜಗುರು

ಸದಾನಂದ ಕನವಳ್ಳಿ


ಬಸವರಾಜ ರಾಜಗುರು ಎಂದಾಕ್ಷಣ ಸಂಗೀತದ ಗಂಧವಿರುವವರ ಕಿವಿಯಲ್ಲಿ ಇಂಚರ ಸಂಚರಿಸತೊಡಗುವುದು. ಅವರ ಗಾಯನದ ಮಾಧುರ್ಯ ಅಂತಹದು. ಭಾರತಾದ್ಯಂತ ಬಸವರಾಜ ರಾಜಗುರು ಮೋಡಿಗೆ ಒಳಗಾಗದವರಿಲ್ಲ. ಕೊನೆಯುಸಿರಿನವರೆಗೂ ಸಂಗೀತವನ್ನೆ ಉಸಿರಾಡಿದವರು ಅವರು. ತಮ್ಮ ಸಂಗೀತ ಸೌರಭವನ್ನು ಅಮೆರಿಕೆಯಲ್ಲಿ ಬೀರುವ ಸನ್ನಾಹದಲ್ಲಿ ವೀಸಾ ತೆಗೆಯಿಸಲು ಚೆನ್ನೈಗೆ ಹೋಗಿದ್ದವರು ಬೆಂಗಳೂರಿಗೆ ಜುಲೈ ೨೧, ೧೯೯೧ರಂದು ಬಂದಿಳಿದರು. ಅಲ್ಲಿಯೂ ಶಿಷ್ಯನೊಬ್ಬನಿಗೆ ಸಂಗೀತ ಪಾಠ. "ಈಗ ರಾತ್ರಿ ಇಪ್ಪೊತ್ತು. ಈ ಹೊತ್ತಿನಲ್ಲಿ ಇಂತಿಂಥ ರಾಗ ಹಾಡುತ್ತಾರೆ" ಎಂದು ವಿವರಿಸುತ್ತಿದ್ದರು. ಹಾಡುತ್ತ ಹಾಡುತ್ತ ಸ್ವರಲೋಕದಲ್ಲಿ ಲೀನವಾದರು. ಸಂಗೀತ ಪ್ರಪಂಚ ಬಡವಾಯಿತು.

ಎಲಿವಾಳ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಚಿಕ್ಕ ಗ್ರಾಮ. ಅಲ್ಲೊಂದು ಒಕ್ಕಲುತನದ ಮನೆತನ. ಈ ಮನೆತನ ಮೂಲತಃ ಕೆಳದಿ ರಾಜರ ಗುರುಗಳು. ಹಾಗಾಗಿ, ರಾಜಗುರು ಎಂಬ ಅಡ್ಡಹೆಸರು. ಕಾರಣಾಂತರಗಳಿಂದ ಎಲಿವಾಳಕ್ಕೆ ಬಂದು ನೆಲೆಸಿದ್ದರು. ಬಸವರಾಜ ಆಗಸ್ಟ್ ೨೪, ೧೯೨೦ರಂದು ಜನಿಸಿದ. ಮಹಾಂತಸ್ವಾಮಿ-ರಾಚವ್ವ ತಂದೆತಾಯಿ. ದೊಡ್ಡಪ್ಪ ಸಂಸ್ಕೃತ ವಿದ್ವಾಂಸರು, ಜ್ಯೋತಿಷಿಗಳು. ತಂದೆಗೆ ಸಂಗೀತವೆಂದರೆ ಪಂಚಪ್ರಾಣ. ತಂಜಾವೂರಿಗೆ ಹೋಗಿ ಕರ್ನಾಟಕ ಸಂಗೀತ ಕಲಿತು ಬಂದಿದ್ದರು. ಪಿಟೀಲು ಚೆನ್ನಾಗಿ ನುಡಿಸುತ್ತಿದ್ದರು. ಚಿಕ್ಕಪ್ಪ ಚನ್ನಬಸವಸ್ವಾಮಿ ಬಯಲಾಟ ಪ್ರವೀಣ. ಬಯಲಾಟ ಪದಗಳನ್ನು ಇಂಪಾಗಿ ಹಾಡುತ್ತಿದ್ದುದಲ್ಲದೆ ಹಾರ್ಮೋನಿಯಮ್ ನುಡಿಸುತ್ತಿದ್ದರು. ಬಸವರಾಜನಿಗೆ ಬುದ್ಧಿ ತಿಳಿದಾಗಿನಿಂದಲೂ ಸಂಗೀತದ್ದೆ ಹುಚ್ಚು.

ಬಸವರಾಜ ಆರು ವರ್ಷದವನಿದ್ದಾಗ ತಾಯಿ ತೀರಿಕೊಂಡಳು. ತಂದೆಯೆ ತಾಯಿಯೂ ಆದರು. ಏಳನೆಯ ವರ್ಷಕ್ಕೆ ತಂದೆಯಿಂದ ಸಂಗೀತಪಾಠ ಆರಂಭ. "ಲಂಬೋದರ ಲಕುಮಿಕರ" ಕೃತಿಯಿಂದ ಶ್ರೀಗಣೇಶ. ಸುಮಾರು ಎರಡು ವರ್ಷ ಸರಳೆ, ಜಂಟಿ, ವರ್ಣ, ಕೀರ್ತನೆ ಅಭ್ಯಾಸ ಮಾಡಿಸಿದರು.

ಆಗಿನ್ನೂ ಬಸವರಾಜನಿಗೆ ಒಂಬತ್ತು ವರ್ಷ. ಎಲಿವಾಳದಲ್ಲಿ ಶನಿಪ್ರಭಾವ ನಾಟಕ ಹಚ್ಚಿದ್ದರು. ನಾಟಕ ಕಲಿಸಲು ಪರ ಊರಿನ ಮಾಸ್ತರ ಬಂದಿದ್ದರು. ಹೊಡೆದುಬಡಿದು ಕಲಿಸಿದರೂ ಪಾತ್ರ ಮಾಡುವ ಹುಡುಗರಿಗೆ ಪದ ಹಾಡಲು ಬರುತ್ತಿರಲಿಲ್ಲ. ತಾಲೀಮು ಮನೆಯೊಳಗೆ ಬೇರೆ ಯಾರನ್ನೂ ಬಿಡುತ್ತಿರಲಿಲ್ಲ. ಬಸವರಾಜ ಜಾಲಿ ಬಡ್ಡೆಯ ಮೇಲೆ ಪೀಪಾಯಿ ಇಟ್ಟು ಅದರ ಮೇಲೆ ಹತ್ತಿ ಕಿಡಕಿಯಲ್ಲಿ ಇಣಿಕಿಕ್ಕಿ ಕೇಳುತ್ತ ಒಂದೆರಡು ದಿನಗಳಲ್ಲಿಯೆ ಅವೆಲ್ಲ ಪದಗಳನ್ನು ಸರಾಗವಾಗಿ ಹಾಡಲು ಕಲಿತ. ಹಾರ್ಮೋನಿಯಂ ಜೊತೆಗೆ ಹಾಡುವಾಸೆ. ಇವನು ಕಿಡಕಿಯಲ್ಲಿ ಇಣುಕುವುದನ್ನು ಕಂಡು ನಾಟಕ ಮಾಸ್ತರರು ಕಿಡಕಿ ಮುಚ್ಚಿಸಿದರು. ಇದರಿಂದ ಬಸವರಾಜನ ಕೋಪ ಬುಸ್ಸೆಂದಿತು. ಒಂದು ದಿನ ಮಧ್ಯಾಹ್ನ ಎಲ್ಲರೂ ಮಲಗಿರುವಾಗ ಅದ್ಹೇಗೋ ಒಳಗೆ ಹೋಗಿ ಚಾಕುವಿನಿಂದ ತಬಲಾ, ಡಗ್ಗಾ ತೂತು ಕೊರೆದು ಹಾರ್ಮೋನಿಯಂ ಪಟ್ಟಿ ಕಿತ್ತೆಸೆದು ಓಟ ಕಿತ್ತುವುದರಲ್ಲಿದ್ದ. ಮಾಸ್ತರರಿಗೆ ಎಚ್ಚರವಾಯಿತು. ಹಿಡಿದು ಎರಡು ಬಾರಿಸಿದರು. ಅಭಿಮಾನಧನರಾದ ಬಸವರಾಜನ ತಂದೆಗೆ ನಖಶಿಖಾಂತ ಕೋಪ. "ಏ ಮಾಸ್ತರ, ನಿನಗೆ ಲುಕ್ಸಾನ ಆಗಿದ್ದರೆ ಹೊಸ ತಬಲಾ, ಡಗ್ಗಾ ಮಾಡಿಸಿಕೊಡುತ್ತಿದ್ದೆ. ನಮ್ಮ ಹುಡುಗನನ್ನು ಏಕೆ ಹೊಡೆದೆ?" ಎಂದು ಗದರಿಸಿದರು. ಮಾಸ್ತರರು "ನಿಮ್ಮ ದಮ್ಮಯ್ಯ, ತಪ್ಪಾಯಿತು, ಕ್ಷಮಿಸಿರಿ" ಎಂದು ಬೇಡಿಕೊಂಡರು.

ಮಹಾಂತಸ್ವಾಮಿ ಮಗನತ್ತ ಹೊರಳಿ "ನಿನಗೆ ಸಂಗೀತ ಕಲಿಯುವ ಹುಚ್ಚಿದ್ದರೆ ಇಂಥ ಕ್ಷುಲ್ಲಕ ನಾಟಕ ಮಾಸ್ತರರಲ್ಲಿ ಏಕೆ, ದೊಡ್ಡ ನಾಟಕ ಕಂಪನಿಯಲ್ಲಿಡುವೆ" ಎಂದರು. ಅದೇ ಸುಮಾರಿಗೆ ಅವರ ಬಾಲ್ಯ ಸ್ನೇಹಿತ ವಾಮನರಾವ ಮಾಸ್ತರರ 'ವಿಶ್ವ ಗುಣಾದರ್ಶ ನಾಟಕ ಮಂಡಳಿ' ಹುಬ್ಬಳ್ಳಿಯಲ್ಲಿ ಕ್ಯಾಂಪ್ ಮಾಡಿತ್ತು. ಕರೆದುಕೊಂಡು ಹೋಗಿ ಮಗನನ್ನು ಸೇರಿಸಿಬಂದರು. ಬಸವರಾಜ ಬಾಲನಟನಾಗಿ ಬಾಲಕೃಷ್ಣ, ದಾಸಿ ಮುಂತಾದ ಪಾತ್ರಗಳಲ್ಲಿ ಮಿಂಚಿದ. ಕಂಚಿನ ಕಂಠ ಬೇರೆ. ಸ್ವತಃ ವಾಮನರಾವ ಮಾಸ್ತರರು ನಾಟಕದ ಹಾಡುಗಳನ್ನು ಅಭ್ಯಾಸ ಮಾಡಿಸುತ್ತಿದ್ದರು. ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಹೊಸಪೇಟೆ, ಬಳ್ಳಾರಿ, ಗದಗ, ಹರಿಹರ, ದಾವಣಗೆರೆ ಮುಂತಾದ ಊರುಗಳಿಗೆ ನಾಟಕ ಕಂಪನಿಯೊಂದಿಗೆ ಸುತ್ತಾಟ. ಒಮ್ಮೆ ಬಟ್ಟೆಗೆ ಸಾಬೂನು ಹಚ್ಚುತ್ತ "ಬಾಜಿರಾವ ಪೇಶ್ವೆ" ನಾಟಕದ "ಕೊಟ್ಟ ಕಾಲಕೆ ದೇವರು ನಿನಗೆ, ಕೆಟ್ಟ ಕೃತಿಯ ಮಾಡಲು ಬೇಡ" ಎಂಬ ಹಾಡು ಹೇಳುತ್ತಿದ್ದ. ವಾಮನರಾವ ಮಾಸ್ತರ ಹಿಂದೆ ಬಂದು ನಿಂತುದರ ಪರಿವೆಯೆ ಇಲ್ಲ. ಉಳಿದ ಹುಡುಗರು ಚಿವಿದು ಎಚ್ಚರಿಸಿದಾಗಲೆ ತಿಳಿದದ್ದು. ಬಸವರಾಜನಿಗೆ ಗಾಬರಿ. ಆದರೆ, ಮಾಸ್ತರರು "ಇವನ ಹಾಂಗ ಹಾಡಿರಿ, ನೋಡೂಣು" ಎಂದು ಮೆಚ್ಚುಗೆ ಸೂಸಿ ಹೊರಟುಹೋದರು. ನಾಟಕ ಕಂಪನಿ ಸೇರಿ ಒಂದು ವರ್ಷವಾಗಿರಬಹುದು. ತಂದೆ ಮಹಾಂತಸ್ವಾಮಿ ಪ್ಲೇಗಿಗೆ ತುತ್ತಾದರು. ದಿಕ್ಕು ತೋಚದಾಯಿತು. ಆಗ ನೆರವಿತ್ತವರು ಕೆಳದಿ ಸಂಸ್ಥಾನ ಮಠಾಧಿಪತಿಗಳಾಗಿದ್ದ ಶ್ರೀ ರೇವಣಸಿದ್ಧ ಶಿವಾಚಾರ್ಯರು. ಅವರು ಬಸವರಾಜನ ದೊಡ್ಡಪ್ಪನ ಮಗ. ಮುಂದೆ ಬಸವರಾಜನನ್ನು ಮಠಕ್ಕೆ ಮರಿ ಮಾಡಿಕೊಳ್ಳುವಾಸೆ ಅವರಿಗಿದ್ದಂತಿತ್ತು. ಆದುದರಿಂದ,



ನಾಟಕ ಕಂಪನಿ ಬಿಡಿಸಿ ಹುಬ್ಬಳ್ಳಿಯ ಮೂರುಸಾವಿರ ಮಠದ ಸಂಸ್ಕೃತ ಪಾಠಶಾಲೆ ಸೇರಿಸಿದರು. ಒಂದು ದಿನ ಬೇರೆ ಊರಿಗೆ ಹೊರಟಿದ್ದ ಪಂಚಾಕ್ಷರಿ ಗವಾಯಿಗಳು ಬಸ್ ತಪ್ಪಿ ಮೂರುಸಾವಿರ ಮಠಕ್ಕೆ ಬಂದರು. ಗುರುಸಿದ್ಧ ಸ್ವಾಮಿಗಳು "ಈ ಹುಡುಗ ಛಲೋ ಹಾಡತಾನ. ನಿಮ್ಮ ಸಂಗಡ ಕರಕೊಂಡು ಹೋಗಿರಿ" ಎಂದು ಶಿಫಾರಸ್ಸು ಮಾಡಿದರು. ಪಂಚಾಕ್ಷರಿ ಗವಾಯಿಗಳು "ಮಗೂ, ಒಂದು ಹಾಡ ಹೇಳಪಾ" ಅಂದರು. ಬಸವರಾಜ "ವೀರ ಅಭಿಮನ್ಯು" ನಾಟಕದ "ಭಕ್ತ ಜೀವನ ರಾಮಾ ಸುಜನ ಜೀವನ" ಎಂಬ ಪದ ಹಾಡಿದ. ಅಂಧರಾದ ಪಂಚಾಕ್ಷರಿ ಗವಾಯಿಗಳು ಬಸವರಾಜನನ್ನು ಕರೆದು ಮೈದಡವಿ "ಎಷ್ಟು ಛಂದ ಗಿರಡಿ ಹೊರಳಸತಿಯಲ್ಲೊ! ಎಲ್ಲಿ ನೋಡೋಣ, ಇನ್ನೊಂದು ಹಾಡು" ಎಂದರು. ಬಸವರಾಜ ಅದೇ ನಾಟಕದ "ಕರುಣಾ ಸಾಗರಾ ಪ್ರಭು ಪರಮಾತ್ಮಾ" ಹಾಡಿದ. ಪಂಚಾಕ್ಷರಿ ಗವಾಯಿಗಳು ಗುರುಸಿದ್ಧ ಸ್ವಾಮಿಗಳನ್ನುದ್ದೇಶಿಸಿ "ಬುದ್ಧೀ, ನಮಗ ಹುಡುಗ ಒಪ್ಪಿಗೆ ಆಗ್ಯಾನ. ಇಂದೇ ಕರೆದೊಯ್ಯುವೆ" ಎಂದರು. ಬಸವರಾಜನ ಅದೃಷ್ಟ ತೆರೆಯಿತು. ಇದು ನಡೆದದ್ದು ೧೯೩೦ ಜೂನ್ ತಿಂಗಳಲ್ಲಿ.

ಬಸವರಾಜನು ಪಂಚಾಕ್ಷರಿ ಗವಾಯಿಗಳ ಗಿಳಿವಿಂಡು ಸೇರಿದ. ಬೆಳಿಗ್ಗೆ ನಾಲ್ಕರಿಂದ ಎಂಟರವರೆಗೆ ಸಂಗೀತಪಾಠ. ಆಮೇಲೆ ಸ್ನಾನ, ಪೂಜೆ, ಊಟ, ವಿಶ್ರಾಂತಿ. ಸಂಜೆ ನಾಲ್ಕರಿಂದ ಏಳರವರೆಗೆ ಪುನಃ ಸಂಗೀತಾಭ್ಯಾಸ. ಉಳಿದ ಸಮಯದಲ್ಲಿ ಕನ್ನಡ, ಸಂಸ್ಕೃತ ಕಾವ್ಯ, ಪುರಾಣಗಳ ಅಭ್ಯಾಸ. ದಣಿವರಿಯದ ಗುರು, ದಣಿವರಿಯದ ಶಿಷ್ಯ. ಕೆಲವು ವರ್ಷ ಶಿವಯೋಗಮಂದಿರದಲ್ಲಿ, ಆಮೇಲೆ ಸಂಚಾರಿ ಸಂಗೀತಶಾಲೆಯೊಂದಿಗೆ ಕರ್ನಾಟಕ ತುಂಬೆಲ್ಲ ಸುತ್ತಾಟ. ಬಸವರಾಜ ಏಕಪಾಠಿ. ಪಂಚಾಕ್ಷರಿ ಗವಾಯಿಗಳು ಅಬ್ದುಲ್ ಕರೀಮಖಾನ, ಅಖ್ತರಬಾಯಿ, ನಿಸ್ಸಾರ ಹುಸೇನಖಾನ, ಫೈಯಾಜಖಾನ ಮೊದಲಾದವರ ಗ್ರಾಮೊಫೋನ ಧ್ವನಿಮುದ್ರಿಕೆಗಳನ್ನು ತರಿಸುತ್ತಿದ್ದರು. ಅವುಗಳ ಉಸ್ತುವಾರಿಯನ್ನು ಬಸವರಾಜನಿಗೆ ಒಪ್ಪಿಸಿದ್ದರು. ಅವರೆಲ್ಲ ಬೇರೆ ಬೇರೆ ಶೈಲಿಯ ಗಾಯಕರಾಗಿದ್ದರೂ ಅವರ ಧ್ವನಿಮುದ್ರಿಕೆ ಕೇಳಿ ತದ್ರೂಪ ಹಾಡುತ್ತಿದ್ದ. ಅಂಥ ಗ್ರಹಣಶಕ್ತಿ ಬಸವರಾಜನದು. ಹನ್ನೊಂದು ವರ್ಷ ಕರ್ನಾಟಕ ಹಿಂದುಸ್ತಾನಿ ಪದ್ಧತಿಗಳೆರಡರಲ್ಲೂ ಬಸವರಾಜ ಪಂಚಾಕ್ಷರಿ ಗವಾಯಿಗಳ ಗರಡಿಯಲ್ಲಿ ಪಳಗಿದ.

ಪಂಚಾಕ್ಷರಿ ಗವಾಯಿಗಳು ತಮ್ಮ ಶಿಷ್ಯನ ಸಾಧನೆ ಪ್ರದರ್ಶಿಸಲು ಅವಕಾಶಕ್ಕಾಗಿ ಕಾಯ್ದಿದ್ದರು. ೧೯೩೬ರಲ್ಲಿ ಹಂಪೆಯಲ್ಲಿ ವಿಜಯನಗರ ಸಾಮ್ರಾಜ್ಯ ಸಂಸ್ಥಾಪನೆಯ ಷಡಶತಮಾನೋತ್ಸವ. ಹದಿನೈದು ಸಾವಿರ ಶ್ರೋತೃಗಳು, ತಬಲಾ ಸಾಥ ಸ್ವತಃ ಪಂಚಾಕ್ಷರಿ ಗವಾಯಿಗಳವರದು. ಹಾರ್ಮೋನಿಯಂ ಸಾಥ' ಪುಟ್ಟರಾಜ ಗವಾಯಿಗಳದು. ಅಂದಮೇಲೆ ಕೇಳಬೇಕೆ? ಕರ್ಣರಸಾಯನ. ಬಸವರಾಜ ರಾಜಗುರು ಬಾಗೇಶ್ರೀ ರಾಗ ಹಾಡಿದರು. ನಂತರ ನಿಜಗುಣ ಶಿವಯೋಗಿಗಳ "ನೋಡಲಾಗದೆ ದೇವಾ" ಹಾಡಿದರು. ಬೃಹತ್ ಶ್ರೋತೃಸಮೂಹ ಚಪ್ಪಾಳೆ ಸುರಿಸಿತು. ಸಂಘಟಕರು ಒಂದು ಬಂಗಾರದ ಉಂಗುರ, ಐದು ರೂಪಾಯಿ ನೀಡಿದರು. ಅಂದು ಅದು ದೊಡ್ಡ ಮೊತ್ತ, ಬಸವರಾಜರಿಗೆ ಆಗ ತಾನೆ ಹದಿನಾರು ವರ್ಷ. ಮೈಸೂರು ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರು ವೇದಿಕೆಗೆ ಬಂದು ಬೆನ್ನು ಚಪ್ಪರಿಸಿ 'ಗವಾಯಿಗಳೆ, ಒಳ್ಳೆಯ ಶಿಷ್ಯರತ್ನವನ್ನು ಸಂಪಾದಿಸಿದ್ದೀರಿ' ಎಂದು ಹೊಗಳಿದರು.

೧೯೩೬ರಲ್ಲಿ ಮುಂಬಯಿ ಆಕಾಶವಾಣಿಯಲ್ಲಿ ಪ್ರಥಮ ಕಾರ್ಯಕ್ರಮ. ಹದಿನೈದು ನಿಮಿಷಕ್ಕೊಂದರಂತೆ ಎರಡು ರಾಗಗಳು, ಬೆಳಿಗ್ಗೆ ಬಿಲಾವಲ, ರಾತ್ರಿ ಗೌಡಮಲ್ಹಾರ. ಸುತ್ತೆಲ್ಲ ಖ್ಯಾತಿ ಪಸರಿಸಿತು. ೧೯೩೬-೪೧ರ ಮಧ್ಯೆ ಬಸವರಾಜ ರಾಜಗುರುಗಳ ಹಲವಾರು ಧ್ವನಿಮುದ್ರಿಕೆಗಳು ಹೊರಬಂದವು : ಶ್ಯಾಮ ಕಲ್ಯಾಣ, ದೇಸಿ, ಮಾಲಕಂಸ, ಮೇಘ, ಚಾಂದನಿ ಕೇದಾರ, ಹಂಸಧ್ವನಿ, ೧೨ ವಚನಗಳು : ಪರಚಿಂತೆ ಎಮಗೆ ಏಕೆ ಅಯ್ಯಾ, ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ, ವಚನದಲ್ಲಿ ನಾಮಾಮೃತ ತುಂಬಿ, ಜಗವ ಸುತ್ತಿಪ್ಪುದು ನಿನ್ನ ಮಾಯೆ, ಮಡಕೆಯ ಮಾಡುವರೆ ಮಣ್ಣೆ ಮೊದಲು, ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ ಇತ್ಯಾದಿ. ಅವು ಎಷ್ಟು ಜನಪ್ರಿಯವಾದವೆಂದರೆ ಹಳ್ಳಿಹಳ್ಳಿಯಲ್ಲಿ ಎಲ್ಲರ ನಾಲಗೆಯ ಮೇಲೆ ಅವುಗಳೇ. ವಚನಗಳನ್ನು ರಾಗಾಧಾರಿತ ಮಟ್ಟುಗಳಲ್ಲಿ ಮೊದಲು ಸಂಯೋಜಿಸಿದವರು ಗುರು ಪಂಚಾಕ್ಷರಿ ಗವಾಯಿಗಳು. ವಚನಗಳ ಮೊದಲ ಗಾನಮುದ್ರಿಕೆಗಳು ಹೊರಬಂದುದು ಬಸವರಾಜ ರಾಜಗುರು ಅವರವು. ವಚನಗಾಯನವನ್ನು ಜನಪ್ರಿಯಗೊಳಿಸುವಲ್ಲಿ ಬಸವರಾಜ ರಾಜಗುರು ಅವರ ಪಾತ್ರ ಮಹತ್ವದ್ದು.

ಬಸವರಾಜ ರಾಜಗುರು ಅವರಿಗೆ ಈಗ ಭಾರತಾದ್ಯಂತ ಸುತ್ತಬೇಕು. ಖ್ಯಾತಿ ಪಡೆಯಬೇಕೆಂಬ ಅದಮ್ಯ ಬಯಕೆ. ೧೯೪೧ರಲ್ಲಿ ಗುರು ಪಂಚಾಕ್ಷರಿ ಗವಾಯಿಗಳ ಆಶೀರ್ವಾದ ಪಡೆದು ಹೊರಟಿದ್ದೆ. ಹುಲಿ ಗವಿ ಬಿಟ್ಟು ವಿಶಾಲ ಅರಣ್ಯಕ್ಕೆ ಬಂದಂತಾಯಿತು. ಸೀದಾ ಮುಂಬಯಿಗೆ ಬಂದರು. ಕಾರ್ಯಕ್ರಮ ನೀಡುವುದು, ಇನ್ನೂ ಕಲಿಯುವುದು ಅವರ ವ್ರತ. ಎರಡು ವರ್ಷ ಇದೇ ದಿನಚರಿ. ಮುಂಬಯಿಯಲ್ಲಿ ಸವಾಯಿ ಗಂಧರ್ವರ ಸಾಹಚರ್ಯ. ಕೆಲಕಾಲ ಒಂದೇ ಕೋಣೆಯಲ್ಲಿ ವಾಸ. ಅವರಿಂದಲೂ ಕಲಿಕೆ. ಸವಾಯಿ ಗಂಧರ್ವರಿಗೆ ಅರ್ಧಾಂಗವಾಯು ಬಡಿದು ಮುಂಬಯಿ ಬಿಡುವಾಗ ಸುರೇಶಬಾಬು ಮಾನೆ ಅವರಲ್ಲಿ ಹೀಗೆ ಆಗ್ರಹ : "ಈ ಹುಡುಗನ ಮೇಲೆ ನಿಮ್ಮ ಸಂಪೂರ್ಣ ಲಕ್ಷ್ಯವಿರಲಿ". ೧೯೪೩ರಲ್ಲಿ ಬಸವರಾಜ ರಾಜಗುರು ನಾಗಪುರದ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಕಚೇರಿ ನೀಡಿದರು. ಅಲ್ಲಿಂದ ಅವರ ಸಂಗೀತ ಯಶೋಯಾತ್ರೆ, ಆರಂಭಗೊಂಡಿತು. ರಾಜಗುರು ಹಾಡದ ಸಮ್ಮೇಳನಗಳಿಲ್ಲ, ಆಕಾಶವಾಣಿ ಕೇಂದ್ರಗಳಿಲ್ಲ, ಗುರುಗಳನ್ನರಸಿ ತಿರುಗಾಡದ ಊರುಗಳಿಲ್ಲ, ಅವರ ಸಂಗೀತ ಜ್ಞಾನದಾಹ ಅಂಥದು.

ಗುರುಗಳನ್ನರಸಿ ರಾಜಗುರು ಲಾಹೋರಿಗೆ ಬಂದರು. ಪಂಚಾಕ್ಷರಿ ಗವಾಯಿಗಳ ಗುರುಗಳೂ ಕಿರಾಣಾ ಘರಾಣೆಯ ಅಧ್ವರ್ಯುಗಳೂ ಆಗಿದ್ದ ಅಬ್ದುಲ್ ವಹೀದಖಾನರು "ಪಂಚಾಕ್ಷರಿ ಕಾ ಶಾಗಿರ್ದ ಹೈ" ಎಂದು ಸಂತಸಪಟ್ಟು ಎರಡೂವರೆ ವರ್ಷ ವಿದ್ಯಾದಾನ ಮಾಡಿದರು. ೧೯೪೪ರಲ್ಲಿ ರಾಜಗುರು ಲತೀಫಖಾನರಲ್ಲಿ ವಿದ್ಯೆ ಸಂಪಾದಿಸಲು ಕರಾಚಿಗೆ ಹೋಗಿ ಆರು ತಿಂಗಳು ಇದ್ದರು. ಭಾರತದಿಂದ ಪಾಕಿಸ್ತಾನ ವಿಭಜನೆಯ ಆಂದೋಲನ. ೧೯೪೭ರಷ್ಟೊತ್ತಿಗೆ ಹಿಂದೂ-ಮುಸ್ಲಿಮ ದ್ವೇಷದ ಕಾಳ್ಗಿಚ್ಚು ಹಬ್ಬಿತು. ಗುರು ಲತೀಫ ಖಾನರು "ಬೇಟಾ, ಅಬ್ ತುಮ್ ಚಲೆ ಜಾವೊ. ಯಂಹಾ ಖೈರಿಯತ್ ನಹೀಂ ಹೈ" ಎಂದು ಕಳಿಸಿಕೊಟ್ಟರು. ರಾಜಗುರು ಕೈಯಲ್ಲಿ ಜೀವ ಹಿಡಿದುಕೊಂಡು ರೈಲುಗಾಡಿಯೇರಿದರು. ನಿಷ್ಕಾರಣ, ನಿಷ್ಕರುಣ ಕೊಲೆಯನ್ನು ಕಣ್ಣಾರೆ ಕಂಡರು. ಭಾರತ-ಪಾಕ್ ನಡುವೆ ಅದೇ ಕೊನೆಯ ರೈಲಾಯಿತು.



ಬಸವರಾಜ ರಾಜಗುರು ತಮ್ಮ ಗಾಯನ ಪೌರುಷ ಮೆರೆದ ಪ್ರಸಂಗಗಳು ಹತ್ತು ಹಲವು. ಅವರಿಗೆ ತಮ್ಮ ಗಾಯನ ಸಾಮರ್ಥ್ಯದ ಬಗೆಗೆ ಅಳುಕಿಲ್ಲದ ಆತ್ಮವಿಶ್ವಾಸ. ಅವರೊಬ್ಬ ಜಿದ್ದಿ ಗಾಯಕ. ಸೋಲುವವರೆ ಅಲ್ಲ. ಹಿಂದೆ ಮುಂದೆ ಹಾಡುವವರಿದ್ದರೆ ಎಲ್ಲಿಲ್ಲದ ಉತ್ಸಾಹ. ಅವರನ್ನು ಮೀರುವಂತೆ ಹಾಡುತ್ತಿದ್ದರು. ೧೯೫೫. ದಿಲ್ಲಿಯ ನಗರಭವನ. ವಿಷ್ಣು ದಿಗಂಬರ ಪಲುಸ್ಕರರ ಪುಣ್ಯತಿಥಿ, ಭಾರತದ ಎಲ್ಲೆಡೆಗಳಿಂದ ಬಂದಿದ್ದ ಉದ್ದಾಮ ಸಂಗೀತಗಾರರ ಸಮಾವೇಶ. ಓಂಕಾರನಾಥ ಠಾಕೂರ ಭರ್ಜರಿ ಹಾಡಿದರು. ಆಮೇಲೆ ಹಾಡಲು ಗಾಯಕರು ನಾ ಒಲ್ಲೆ ನೀ ಒಲ್ಲೆ ಎನ್ನತೊಡಗಿದರು. ವಾದ್ಯ ಸಂಗೀತದ ಸಿದ್ಧತೆ ನಡೆಯಿತು. ಅಷ್ಟರಲ್ಲಿ ಬಸವರಾಜ ರಾಜಗುರು "ನಾ ಹಾಡುವೆ" ಎಂದರು. ಸಭೆ ಮೂಕವಿಸ್ಮಯ. "ಆಯಿತು, ನಿಮ್ಮ ಸಾಧನೆ ಪ್ರದರ್ಶಿಸಿರಿ" ಎಂದು ಸಂಘಟಕರ ಕೊಂಕುನುಡಿ. ರಾಜಗುರು ನಾಯಕಿ ಕಾನಡಾ ಹಾಡಿ ಶ್ರೋತೃಗಳನ್ನು ಮಂತ್ರಮುಗ್ಧಗೊಳಿಸಿದರು. ಅದೆಂಥ ಎದೆಗಾರಿಕೆ. ಅದವರ ಪ್ರಥಮ ದಿಲ್ಲಿ ಬೈಠಕ್ ಬೇರೆ.

೧೯೫೫, ನಾಂದೇಡ ಸಂಗೀತ ಸಮ್ಮೇಳನ. ರಾಜಗುರು ರಾತ್ರಿ ಹಾಡಬೇಕಿತ್ತು. ಬೆಳಿಗ್ಗೆ ೮ ಗಂಟೆಗೆ ನಾಂದೇಡ ತಲುಪಿದ್ದರು. ಬೆಳಿಗ್ಗೆ ಹಾಡಬೇಕಿದ್ದ ಡಿ.ವಿ. ಪಲುಸ್ಕರ ಬಂದಿರಲಿಲ್ಲ. ಸಂಘಟಕರು ಬೆಳಿಗ್ಗೆಯೆ ಹಾಡುವಂತೆ ರಾಜಗುರು ಅವರನ್ನು ವಿನಂತಿಸಿಕೊಂಡರು. ಮುಖ ತೊಳೆದುಕೊಂಡು ಹಾಲು ಕುಡಿದು ವೇದಿಕೆಯೇರಿದರು. ಗಾಯನ ಮುಗಿಸಲು ಶ್ರೋತೃಗಳು ಬಿಡಲೊಲ್ಲರು. ಸಂಗೀತ ಬಲ್ಲ ಅಂದಿನ ಆಕಾಶವಾಣಿ ಮಂತ್ರಿ ಬಿ.ವಿ. ಕೇಸ್ಕರ ಪುಟ್ಟ ಭಾಷಣ ಮಾಡಿ "ಬಸವರಾಜ ರಾಜಗುರು ಡಿ.ವಿ. ಪಲುಸ್ಕರ ಬಾರದ ನಿರಾಸೆಯನ್ನು ನಿವಾರಿಸಿದರು. ಎಷ್ಟೊತ್ತಿನಲ್ಲಾದರೂ ಹಾಡಿಸಿರಿ. ಅವರ ಗಾಯನ ಎಂದೂ ಹುಸಿ ಹೋಗದು. ಬಸವರಾಜ ರಾಜಗುರು ಹುಕುಮಿ ಎಕ್ಕಾ ಇದ್ದಂತೆ" ಎಂದು ಕೊಂಡಾಡಿದರು.

ಬಸವರಾಜ ರಾಜಗುರು ಅವರದು ಅಪಾರ ವೈವಿಧ್ಯ ಬಹುಶ್ರುತತೆ : ಧ್ರುಪದ, ಧಮಾರ್, ಖ್ಯಾಲ, ಠುಮರಿ, ಗಝಲ್, ವಚನಗಳು, ಕನ್ನಡ ಮತ್ತು ಮರಾಠಿ ರಂಗಗೀತೆಗಳು, ಕನ್ನಡ ಮತ್ತು ಮರಾಠಿ ಭಾವಗೀತೆಗಳು, ದಾಸರ ಪದಗಳು, ಕೀರ್ತನೆಗಳು, ಬಯಲಾಟದ ಹಾಡುಗಳು. ಏನೇ ಹಾಡಿದರೂ ಇಂಚರ ಸಂಚಾರ.

ಬಸವರಾಜ ರಾಜಗುರು ಚೀಜುಗಳ ಭಂಡಾರವೇ ಆಗಿದ್ದರು. ಒಂದೊಂದು ರಾಗದಲ್ಲೂ ೪೦-೫೦ ಚೀಜುಗಳನ್ನು ಹಾಡಬಲ್ಲವರಾಗಿದ್ದರು. ಅವುಗಳಿಗೆ ಸ್ವರಪ್ರಸ್ತಾರ ಹಾಕಿ ಪ್ರಕಟಿಸಿದ್ದರೆ ಅಮೂಲ್ಯ ಗ್ರಂಥವಾಗಿರುತ್ತಿತ್ತು.

ಬಸವರಾಜ ರಾಜಗುರು ಗಾಯನವೆಂದರೆ ಕಿರಾಣಾ, ಗ್ವಾಲಿಯರ, ಪಟಿಯಾಲಾ ಘರಾಣೆಗಳ ತ್ರಿವೇಣಿ ಸಂಗಮ. ಅದು ಹನ್ನೊಂದು ಗುರುಗಳಲ್ಲಿ ಅಭ್ಯಸಿಸಿದ ಫಲ: ಪಂಚಾಕ್ಷರಿ ಗವಾಯಿಗಳು, ನೀಲಕಂಠಬುವಾ ಮಿರಜಕರ, ಸವಾಯಿ ಗಂಧರ್ವ, ಸುರೇಶಬಾಬು ಮಾನೆ, ಬಶೀರಖಾನ, ಮುಬಾರಕ ಆಲಿ, ಅಬ್ದುಲ್ ವಹೀದಖಾನ, ಲತೀಫಖಾನ, ಇನಾಯತುಲ್ಲಾಖಾನ, ರೋಶನ ಅಲಿ, ಗೋವಿಂದರಾವ ಟೇಂಬೆ. ಹೀಗಾಗಿ, ಅವರ ಗಾಯನದಲ್ಲಿ ಎಲ್ಲಿಲ್ಲದ ಸಾರಸಂಗ್ರಹ ಗುಣ. ಇವರೆಲ್ಲರ ಪ್ರಭಾವಗಳನ್ನು ತೇಪೆಯಾಗದಂತೆ ತಮ್ಮ ಪ್ರತಿಭೆಯ ಮೂಸೆಯಲ್ಲಿ ಎರಕ ಹೊಯ್ದುದು ರಾಜಗುರು ಅವರ ದೊಡ್ಡ ಸಾಧನೆ.

ಬಸವರಾಜ ರಾಜಗುರು ಅವರದು ದೈವದತ್ತ ಕಂಠ. ಆ ಎಂದರೆ ಸಾಕು, ಶ್ರೋತೃ ಮಂತ್ರಮುಗ್ಧ. ಧ್ವನಿ ಮೇಣದಂತೆ ಮಿದುವು. ಅತ್ಯಧಿಕ ಸ್ಥಿತಿಸ್ಥಾಪಕತೆ. ಶೃತಿಗೆ ಒಂದಿನಿತೂ ಚ್ಯುತಿಯಾಗದಂತೆ ಮೂರೂ ಸಪ್ತಕಗಳಲ್ಲಿ ಲೀಲಾಜಾಲ ಸಂಚಾರ. ತಾರಸಪ್ತಕದಲ್ಲಂತೂ ವಿಜೃಂಭಣೆ. ಗಝಲ್ ರಾಣಿ ಬೇಗಂ ಅಖ್ತರ್ "ರಾಜಗುರು ಯಾನೆ ಸೂರ ಕಾ ಬಾದಶಾಹ" ಎಂದು ಉದ್ಗರಿಸಿದ್ದು ಸುಮ್ಮನೆ ಅಲ್ಲ.

ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಹಿಂದುಸ್ತಾನಿ ಗಾಯನ ಮಧ್ಯದಲ್ಲಿ ಕರ್ನಾಟಕ ಸ್ವರಪ್ರಸ್ತಾರ ಚಿಮ್ಮಿ ಬರುತ್ತಿದ್ದುದಿದೆ. ಒಮ್ಮೆ ಅಹಿರಭೈರವ ಹಾಡಿದ ಮೇಲೆ ಸಮಾಂತರ ಕರ್ನಾಟಕ ರಾಗ ಚಕ್ರವಾಕಮ್‌ನಲ್ಲಿ ತ್ಯಾಗರಾಜ ಕೃತಿ ಹಾಡಿದ್ದುದಿದೆ. ಎರಡೂ ಪದ್ಧತಿಗಳಲ್ಲಿ ಪರಿಣತಿ.

ಬಸವರಾಜ ರಾಜಗುರು ಅವರ ತೀವ್ರಗತಿಯ ತಾನಗಳಲ್ಲಿ ಬಡೆ ಗುಲಾಮ ಅಲಿ ಖಾನರ ನಿರಾಯಾಸತೆ, ಸಂಕೀರ್ಣತೆ ಇವೆ. ತೀವ್ರಗತಿಯಲ್ಲೂ ಇಂಚರ ಅಬಾಧಿತ. ಕೆಲವು ಗಾಯಕರ ಧ್ವನಿಯಾದರೊ ತೀವ್ರಗತಿಯಲ್ಲಿ ಕೀರಲಾಗಿಬಿಡುತ್ತದೆ. ಸ್ವರಶುದ್ಧತೆಗೆ ಚ್ಯುತಿಬಾರದ ಸ್ಪಷ್ಟೋಚ್ಚಾರಣೆ ರಾಜಗುರು ಅವರ ಗಾಯನದಲ್ಲಿ. ವೃದ್ಧ ಶ್ರೋತೃಗಳು ರಾಜಗುರು ಗಾಯನ ಆಲಿಸುವಾಗ "ಇದು ದೀನಾನಾಥ ಅಂಥದು, ಇದು ನಾರಾಯಣಬುವಾ ಅವರ ಮುರ್ಕಿ, ಇದು ಕೇಶವರಾವ್‌ರ ಚಕ್ರಿ ತಾನ, ಇದು ಶಂಕರರಾವ್‌ರ ಸ್ವರ" ಇತ್ಯಾದಿಯಾಗಿ ಗುರುತಿಸುತ್ತಿದ್ದರು. ರಾಜಗುರು ಗಾಯನದಲ್ಲಿ ಘಸೀಟ್, ಮುರ್ಕಿ, ಗಮಕ್, ಮೀಂಡ್, ಸರಗಮ್, ಬೋಲ್‌ತಾನ್ ಏನೆಲ್ಲ ಮಸಾಲೆಗಳು! ಇವೆಲ್ಲಕ್ಕೆ ಉಪ್ಪಿನಕಾಯಿಯಂತೆ ಅದ್ಭುತ ಆಶುಚಮತ್ಕಾರ. ಅದೊಂದು ನಳಪಾಕ!!

ಬಸವರಾಜ ರಾಜಗುರು ಅವರಿಗೆ ಹಲವು ಬಿರುದು, ಪ್ರಶಸ್ತಿಗಳು ಸಂದಿವೆ. ಇದನ್ನು ಸರಕಾರ, ಸಂಗೀತ ಪ್ರೇಮಿಗಳು ಮತ್ತು ಸಂಸ್ಥೆಗಳು ಕೊಡಮಾಡಿವೆ. **ಗಾನಕೋಕಿಲೆ, ಸಂಗೀತ ಸುಧಾಕರ, ಗಾನಗಂಧರ್ವ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಮುಂಬಯಿಯ ಸೂರಸಿಂಗಾರ್ ಸಂಸದ್‌ನ ಸ್ವರವಿಲಾಸ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಪದ್ಮಭೂಷಣ.**

ಆದರೆ, ಇವೆಲ್ಲಕ್ಕೂ ಮಿಗಿಲಾದ ಪ್ರಶಸ್ತಿಯೆಂದರೆ ಬಸವರಾಜ ರಾಜಗುರು ಅವರು ಬಳುವಳಿಯಾಗಿ ಬಿಟ್ಟುಹೋಗಿರುವ ಶಿಷ್ಯವೃಂದ. ಸೋಮನಾಥ ಮರಡೂರ, ಷಣ್ಮುಖ ಗೋಜನೂರ, ಗಣಪತಿ ಭಟ್ಟ ಹಾಸಣಗಿ, ಪರಮೇಶ್ವರ ಹೆಗಡೆ, ಶ್ರೀಪಾದ ಹೆಗಡೆ, ಶಾಂತಾರಾಮ ಹೆಗಡೆ, ಪೂರ್ಣಿಮಾ ಭಟ್ಟ, ಸಂಗೀತಾ ಕಟ್ಟಿ, ರೋಹಿಣಿ ದೇಶಪಾಂಡೆ, ನಚಿಕೇತ ಶರ್ಮಾ ಮುಂತಾದವರು. ಇವರಲ್ಲನೇಕರು ಉತ್ತಮ ಗಾಯಕರಾಗಿದ್ದು ಗುರುಪರಂಪರೆಯನ್ನು ಮುಂದುವರಿಸಿದ್ದಾರೆ. ಇಷ್ಟೊಂದು ದೊಡ್ಡ ಶಿಷ್ಯಪರಿವಾರ ಹೊಂದಿದ್ದ ಸಂಗೀತಗಾರರು ಅಪರೂಪವೆಂದೇ ಹೇಳಬೇಕು.



# ಡಿ.ವಿ.ಜಿ. ಮತ್ತು ಸಾರ್ವಜನಿಕ ಜೀವನ

- ಎಸ್.ಆರ್. ರಾಮಸ್ವಾಮಿ

ಪ್ರಧಾನ ಸಂಪಾದಕರು, "ಉತ್ಥಾನ" ಮಾಸಪತ್ರಿಕೆ, ಬೆಂಗಳೂರು -560019

*ಎಸ್. ಆರ್. ರಾಮಸ್ವಾಮಿಯವರು ಜನವರಿಯಲ್ಲಿ ನಡೆದ ಡಿ.ವಿ.ಜಿ. ಸಂಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಕ್ತಾರರಲ್ಲಿ ಒಬ್ಬರು. ಅವರ ಭಾಷಣದ ಕೆಲ ಆಯ್ದ ಭಾಗಗಳ ಮೊದಲನೆಯ ಮತ್ತು ಕೊನೆಯ ಕಂತನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.*

*- ಸಂ.*

**ಈ ಸಭೆಯ ಕಲಾಪಕ್ಕೆ ಸಂಬಂಧಿಸಿದ್ದ ಒಂದು ವಿವರ :**

''ಮೈಸೂರು ಮಹಾಜನಸಭೆ ಭಾನುವಾರ ಸೇರಬೇಕೆಂದು ಉದ್ದೇಶ. ಆದರೆ ಎಷ್ಟು ಹೊತ್ತಿಗೆ? ಮಧ್ಯಾಹ್ನ ನಾಲ್ಕೂವರೆ ಎಂದರೆ ರಾಹುಕಾಲ ಬಂದು ಬಿಡುತ್ತದೆಂದು ಶ್ರೀನಿವಾಸರಂಗಾಚಾರ್ಯರ ಆಕ್ಷೇಪಣೆ. ನಾಲ್ಕು ಗಂಟೆಗೆ ಸೇರೋಣವೆಂದರೆ ಅದು ತುಂಬಾ ಬೇಗ. ಲಾಯರುಗಳಿಗೆ ಭಾನುವಾರ ಕೂಡ ಕೊಂಚವೂ ಪುರುಸೊತ್ತಿಲ್ಲದೆ ಹೋಗುತ್ತದೆ.

''ಹೀಗೆ ಬಹು ಚರ್ಚೆ ನಡೆದು ಒಂದು ತೀರ್ಮಾನಕ್ಕೆ ಬಂದೆವು. ನಾಲ್ಕು ಗಂಟೆಗೆ ಉಪಾಹಾರವನ್ನು ಪ್ರಾರಂಭಿಸುವುದು! ಎಂದರೆ ನಾಲ್ಕೂವರೆಗೆ ಮುಂಚೆಯೇ ಸಭೆ ಪ್ರಾರಂಭವಾದಂತಾಯಿತಷ್ಟೆ? ಸಾಮಾಗ್ರಿಗಳ ಸೇವನೆ ಮುಗಿದು ಭಾಷಣ ಪ್ರಾರಂಭವಾಗುವ ವೇಳೆಗೆ ನಾಲ್ಕೂವರೆ ಗಂಟೆ. ಸಭೆ ಮೊದಲೇ ಪ್ರಾರಂಭವಾಗಿದ್ದರಿಂದ ರಾಹುಕಾಲದ ಬಾಧಕವಿಲ್ಲ.

''ಆದರೆ ತಿಂಡಿಯ ಹೊತ್ತಿಗಿದ್ದ ಜನ ಸಭೆಯ ಹೊತ್ತಿಗೆ ಇರುತ್ತಿರಲಿಲ್ಲ. ಏನೋ ನೆವ ಹೇಳಿ ಹೊರಟು ಹೋಗುತ್ತಿದ್ದರು''.

ಇಂಥ ಅನುಭವಗಳು ನಿರಂತರ ಆದರೂ, ಡಿ.ವಿ.ಜಿ. ತಮ್ಮ ಪ್ರಯತ್ನಗಳನ್ನು ಬಿಡದೆ ವರ್ಷಗಳುದ್ದಕ್ಕೂ ಮುಂದುವರಿಸಿದರು.

ಮೈಸೂರು ಮಹಾಜನಸಭೆಯ ಮೂಲಕ 1919ರ ಡಿಸೆಂಬರಿನಲ್ಲಿ ನಡೆದ ಪ್ರಜಾಜನ ಪರಿಷತ್ತು (Mysore people's Convention) ಬಹುಮಟ್ಟಿಗೆ ಡಿ.ವಿ.ಜಿ.ಯವರ ಉತ್ಸಾಹ ಫಲ. ಕರ್ನಾಟಕದ ವಿವಿಧ ಭಾಗಗಳಿಂದ ಮುನ್ನೂರಕ್ಕೂ ಹೆಚ್ಚು ಮಂದಿ ಜನಪ್ರಮುಖರು ಆ ಸಮಾವೇಶದಲ್ಲಿ ಭಾಗಹಿಸಿದ್ದರು

ಆ ಪರಿಷತ್ತಿನ ಮುಖ್ಯ ಉದ್ದೇಶ ಆಗ್ಗೆ ಕೆಲವು ದಿನಗಳ ಹಿದೆ ಪ್ರಕಟವಾಗಿದ್ದ ಮಾಂಟೆಗು - ಚೆಮ್ಸ್‌ಫರ್ಡ್ ಸುಧಾರಣೆಗಳ ವರದಿಯ ಪರಾಮರ್ಶೆ.

ಮೂರು ದಿವಸಗಳ ಆ ಸಭೆ ಅಂಗೀಕರಿಸಿದ ನಿರ್ಣಯಗಳಲ್ಲಿ ಮುಖ್ಯವಾದವು: ಪ್ರಜೆಗಳ ಪೌರಸ್ವಾತಂತ್ರ್ಯಗಳ ವಿಸ್ತರಣೆ; ಮಂತ್ರಿಮಂಡಲದಲ್ಲಿ ಪ್ರಜಾಪ್ರತಿನಿಧಿಗಳಿಗೆ ಸ್ಥಾನ; ಭಾರತ ರಾಜಕೀಯದಲ್ಲಿ ಮೈಸೂರಿಗೆ ಸಮುಚಿತ ಸ್ಥಾನಮಾನ ದೊರೆಯುವಂತೆ ಭಾರತ ರಾಜಕೀಯದ ಪರಿಷ್ಕರಣ; - ಈ ಅಂಶಗಳನ್ನು ಕುರಿತವು.

ಪ್ರಜಾಪ್ರಭುತ್ವಕ್ಕೆ ಅಭಿಮುಖವಾಗಿ ಕರ್ನಾಟಕದಲ್ಲಿ ಅಷ್ಟು ಬೃಹತ್ಪ್ರಮಾಣದ ಸಾರ್ವಜನಿಕ ಸಭೆ ಬಹುಶಃ ಆ ಹಿಂದೆ ಯಾವುದೂ ನಡೆದಿರಲಿಲ್ಲ. ಆ ಸಮಾರಂಭದ ಮುಖ್ಯಪ್ರೇರಕರೂ ಸೂತ್ರಧಾರರೂ ಆಗಿದ್ದವರು ಡಿ.ವಿ.ಜಿ.

1931ರಲ್ಲಿ ಬೆಂಗಳೂರಿನಲ್ಲಿ ನಡೆದ ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತಿನ (States People's Conference) ಸಂಯೋಜನೆಯಲ್ಲಿಯೂ ಡಿ.ವಿ.ಜಿ. ಯವರದು ಪ್ರಧಾನ ಪಾತ್ರವಿತ್ತು. ಆ ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದವರು ಪ್ರಸಿದ್ಧ ರಾಜಕೀಯ ತತ್ತ್ವವೇತ್ತರೂ ಪೂಣೆಯ ಲಾ ಕಾಲೇಜಿನ ಪ್ರಾಧ್ಯಾಪಕರೂ ಆಗಿದ್ದ ಜಿ. ಆರ್. ಅಭಯಂಕರ್.

***

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ 1933ರಿಂದ 1937ರ ವರೆಗೆ ಡಿ.ವಿ.ಜಿ. ಮಾಡಿದ ಕಾರ್ಯ ಆ ಸಂಸ್ಥೆಯ ಚರಿತ್ರೆಯಲ್ಲಿ ಒಂದು ಮೈಲಿಗಲ್ಲು ಎನಿಸಿದೆ.

ಬಹುಮಟ್ಟಿಗೆ ವಿದ್ವಾಂಸರ ಕಲಾಪಗಳಿಗೆ ಸೀಮಿತವಾಗಿದ್ದ ಕನ್ನಡ ಪರಿಷತ್ತಿನ ಚಟುವಟಿಕೆಗಳ ಪ್ರಾಕಾರವನ್ನೇ ವಿಸ್ತರಿಸಿ ಅದಕ್ಕೆ ಸಾಮೂಹಿಕತೆಯನ್ನು ತಂದುಕೊಟ್ಟವರು ಡಿ.ವಿ.ಜಿ.ಯವರು. ಭಾಷಣ, ಕಾವ್ಯವಾಚನ, ಗಮಕ, ಸಂಚಾರೋಪನ್ಯಾಸಗಳು, ವಸಂತ ಸಾಹಿತ್ಯೋತ್ಸವ - ಹೀಗೆ ವಿವಿಧ ಮುಖವಾಗಿ ಪರಿಷತ್ತಿನ ಕಾರ್ಯಕಲಾಪಗಳನ್ನು ಅವರು ಬೆಳೆಸಿದರು. ಅವರು ಬರಿಯ ಮಾತುಗಾರರಾಗಿರಲಿಲ್ಲ. ಅವರದು ಅಸಾಧಾರಣ ಕರ್ತೃತ್ವಶಾಲಿ ವ್ಯಕ್ತಿತ್ವವಾಗಿದ್ದುದರಿಂದ ಇಂಥ ಅಗಾಧ ಕಾರ್ಯಗಳು ಅವರಿಂದ ನಡೆದವು.

### ಗೋಖಲೆ ಸಂಸ್ಥೆ

ಈಗ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ವಿಷಯಕ್ಕೆ ಬರೋಣ.

1915ರ ಫೆಬ್ರವರಿ 19ರಂದು ಗೋಪಾಲಕೃಷ್ಣ ಗೋಖಲೆಯವರು ನಿಧನರಾದರು. ಗೋಖಲೆಯವರ ಆದರ್ಶವನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಡಿ.ವಿ.ಜಿ. ಮತ್ತು ಅವರ ಸ್ನೇಹಿತರು 'ದಿ ಮೈಸೂರ್ ಸೋಷಿಯಲ್ ಸರ್ವೀಸ್ ಲೀಗ್' ಎಂಬ ಸಂಘವನ್ನು ಸ್ಥಾಪಿಸಿದರು. ಆ ಸಂಸ್ಥೆಯೇ ಇಂದಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ''ಮೂಲ''. ಹೀಗೆ ವಾಸ್ತವಾರ್ಥದಲ್ಲಿ ಈಗ ಗೋಖಲೆ ಸಂಸ್ಥೆಯ ವಯಸ್ಸು ತೊಂಬತ್ತು ವರ್ಷ ಎಂದು ಹೇಳಬಹುದು.

1915ರಲ್ಲಿ ಗಾಂಧೀಜಿ ಮದರಾಸಿಗೆ ಬಂದಿದ್ದರು. ಮದರಾಸಿನ ಜಿ.ಎ. ನಟೇಶನ್ ಅವರ ಮೂಲಕ ಸೋಷಿಯಲ್ ಸರ್ವಿಸ್ ಲೀಗಿನ ಈ ಸ್ನೇಹಿತರು ಗಾಂಧಿಯವರನ್ನು ಬೆಂಗಳೂರಿಗೆ ಆಹ್ವಾನಿಸಿದರು. ಹಾಗೆ 5.5.1915ರಂದು ಬೆಂಗಳೂರಿಗೆ ಗಾಂಧಿಯವರು ಬಂದ ದಿನ ಬೆಂಗಳೂರಿನಲ್ಲಿ ಅತಿಶಯವಾದ ಸಂಭ್ರಮ. ಅಂದು ನಡೆದ ಎರಡು ಮೂರು ಕಾರ್ಯಕ್ರಮಗಳ ಪೈಕಿ ಸೋಷಿಯಲ್ ಲೀಗಿನ ಆಶ್ರಯದಲ್ಲಿ ಗಾಂಧಿಯವರು ಗೋಖಲೆಯವರ ಚಿತ್ರವೊಂದನ್ನು ಅನಾವರಣ ಮಾಡಿದ್ದು ಮುಖ್ಯವಾದದ್ದು. ಆ ಚಿತ್ರ ಇಂದಿಗೂ ಬೆಂಗಳೂರಿನ ಗೋಖಲೆ ಸಂಸ್ಥೆಯ ಸಭಾಂಗಣವನ್ನು ಅಲಂಕರಿಸುತ್ತಿದೆ. ಡಿ.ವಿ.ಜಿ.ಯವರು ಗಾಂಧಿಯವರನ್ನು ಸ್ವಾಗತಿಸುತ್ತ ಬಿನ್ನವತ್ತಲೆಯನ್ನು ಅರ್ಪಿಸಿದರು- ಕನ್ನಡದಲ್ಲಿ. ಅದರ ಇಂಗ್ಲಿಷ್ ರೂಪಾಂತರವನ್ನು ಆಮೇಲೆ ಓದಲಾಯಿತು. ಅನಂತರ ಮಾತನಾಡಿದ ಗಾಂಧಿಯವರು, 'ದೇಶ ಸೇವೆಯನ್ನು ಮಾಡಲು ಹೊರಟ ಪ್ರತಿಯೊಬ್ಬ ಭಾರತೀಯನೂ ರಾಜಕೀಯ ಕ್ಷೇತ್ರದಲ್ಲಿ ದುಡಿಯಬೇಕು. ರಾಜಕೀಯ ಜೀವನವನ್ನೂ ರಾಜಕೀಯ ಸಂಸ್ಥೆಗಳನ್ನೂ ಧರ್ಮಾಚರಣೆಯೋ ಎಂಬಂತೆ ನಡೆಸಬೇಕು. ಗೋಖಲೆಯವರು ನನಗೆ ಇದನ್ನು ಕಲಿಸಿದರು. ನಾನು ನನ್ನ ಜೀವನವನ್ನು ಇದರ ಪಾಲನೆಗಾಗಿಯೇ ಮುಡುಪಾಗಿ ಟ್ಟಿದ್ದೇನೆ'' ಎಂದು ಹೇಳಿದರು.

ಗೋಖಲೆಯವರ ಬಗ್ಗೆ ಹಿಂದೆಯೂ ತಿಳಿದಿದ್ದ ಡಿ.ವಿ.ಜಿ.ಯವರಿಗೆ ಗಾಂಧಿಯವರ ದೃಷ್ಟಿ ಒಂದು ಹೊಸ ಸ್ಫೂರ್ತಿಯನ್ನು ನೀಡಿತು. ''Public life must be spirtualised'' ಎಂಬ ಮಾತುಗಳು ಅವರ ಮನಸ್ಸಿನಲ್ಲಿ ಆಳವಾಗಿ ಹೊಕ್ಕು ಅವರನ್ನು ಚಿಂತಿಸುವಂತೆ ಮಾಡಿದುವು. ಲೌಕಿಕ ವೈದಿಕಗಳು ಬೇರೆಬೇರೆಯೆಂದು ಕಾಣುವುದು ತಪ್ಪೆಂಬ ಅಭಿಪ್ರಾಯವಿದ್ದ ಡಿ.ವಿ.ಜಿ.ಯವರಿಗೆ ಅವೆರಡನ್ನೂ ಸಮನ್ವಯಗೊಳಿಸುವ ಗೋಖಲೆ - ಗಾಂಧಿ ದರ್ಶನ ಒಂದು ಹೊಸ ದಾರಿಯನ್ನೇ ತೋರಿಸಿತು. 23.2.1916ರಿಂದ 'ಕರ್ನಾಟಕ' ಪತ್ರಿಕೆಯ ಧ್ಯೇಯವಾಕ್ಯವೂ ''Public life must be spirtitualised'' ಎಂಬುದಾಯಿತು.

ಈ ಉದ್ದೇಶದ ಸಾಧನೆಗಾಗಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯೆಂಬ ಹೆಸರುಳ್ಳ ಸಂಸ್ಥೆಯನ್ನು ಸ್ಥಾಪಿಸಬೇಕು, ಎಂಬುದು ಅವರ ಅಂತರಂಗದಲ್ಲಿ 1915ರಿಂದಲೂ ಬೇರೂರಿದ್ದ ಆಕಾಂಕ್ಷೆ.



ಇದು ಯಾವ ರಾಜಕೀಯ ಪಕ್ಷಕ್ಕಾಗಲಿ ಸಂಘಟನಧಾರೆಗಾಗಲಿ ಸೇರದೆ ಯಾರೊಬ್ಬರ ದಾಕ್ಷಿಣ್ಯಕ್ಕೂ ಒಳಗಾಗದೆ ಇರುವ ಸ್ವತಂತ್ರ ಸಂಸ್ಥೆಯಾಗಿರಬೇಕು.

ಡಿ.ವಿ.ಜಿ. ತಮ್ಮ ಯೋಜನೆಯನ್ನು 1930ರಲ್ಲಿ ಅಂದಿನ ಸಾರ್ವಜನಿಕ ಜೀವನದ ಪ್ರಮುಖರಾದ ಕೆ.ವಿ. ಪುಟ್ಟಣ್ಣ ಶೆಟ್ಟರು ಮುಂತಾದವರಲ್ಲಿ ಪ್ರಸ್ತಾಪಿಸಿದರು. ಆದರೆ ಹಣದ ಏರ್ಪಾಡು ಆಗಲಿಲ್ಲ.

1932ರ ಜನವರಿಯಲ್ಲಿ ಈ ಯೋಚನೆಗೆ ಮತ್ತೆ ಜೀವಕೊಟ್ಟರು. ಆಗಲೂ ಅವರ ಆಸೆ ಸಫಲವಾಗಲಿಲ್ಲ.

1941ರಲ್ಲಿ ಮೈಸೂರು ಸಂಸ್ಥಾನದಲ್ಲಿ ಸುಧಾರಣೆಗಳು ಜಾರಿಗೆ ಬಂದಾಗ ಶಾಸನ ಸಭೆಗಳ ಸದಸ್ಯರಿಗೂ ಆಸಕ್ತಿಯುಳ್ಳ ಇತರ ಮಹಾಜನರಿಗೂ ಉಪಯುಕ್ತವಾಗುವಂತೆ ಒಂದು ರಾಜಕೀಯ ಗೋಷ್ಠಿಯನ್ನು ನಡೆಸಿದರು. ''ಗೋಖಲೆ ಸ್ಮಾರಕ ಸಾರ್ವಜನಿಕ ವಿಚಾರ ಸಂಸ್ಥೆ'' ಎಂಬ ಹೆಸರಿನ ವೇದಿಕೆ ನ್ಯಾಶನಲ್ ಕಾಲೇಜಿನಲ್ಲಿ ಮೇ 22, 1941ರಿಂದ ಮೇ 25ರ ವರೆಗೆ ಈ ಗೋಷ್ಠಿಯನ್ನು ನಡೆಸಿತು.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಜಪಾನೀಯರ ದಾಳಿಯ ಸಂಭವದ ಸನ್ನಿವೇಶ ಒದಗಿದಾಗ ಡಿ.ವಿ.ಜಿ. ಬೆಂಗಳೂರಿನ ನಾಗರಿಕ ಸಂರಕ್ಷಣೆಗಾಗಿ ''ಆತ್ಮ ಸಂರಕ್ಷಣಾ ಸಮಿತಿ''ಯೊಂದನ್ನು ರಚಿಸಿದರು. ರಾತ್ರಿ ಗಸ್ತು ತಿರುಗುವುದು ಮುಂತಾದ ಕಾರ್ಯಕ್ರಮಗಳು.

25.11.1944ರಲ್ಲಿ ಡಿ.ವಿ.ಜಿ. ಪುನಃ ಧೈರ್ಯಮಾಡಿ 20-30 ಸ್ನೇಹಿತರಿಗೆ ಪತ್ರಗಳನ್ನು ಬರೆದು ಗೋಖಲೆ ಸಂಸ್ಥೆಯನ್ನು ಪ್ರಾರಂಭಿಸುವ ಯೋಚನೆಯನ್ನು ತಿಳಿಸಿದರು. ಸಭೆಯೊಂದನ್ನು ಕರೆದರು. ಡಿ.ವಿ.ಜಿ.ಯವರ ಮನೆಯಲ್ಲೇ ಅದು ನಡೆಯಿತು. (18.2.1945)

ಹೀಗೆ ಡಿ.ವಿ.ಜಿ.ಯವರ 30 ವರ್ಷಗಳ ತಪಸ್ಸಿನ ಫಲವಾಗಿ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಅಂತಿಮವಾಗಿ 1945ರಲ್ಲಿ ಸ್ಥಾಪಿತವಾಯಿತು. ಅಲ್ಲಿಂದ ನಿರಂತರವಾಗಿ ಈ ಅರವತ್ತು ವರ್ಷವೂ ಕೆಲಸ ಮಾಡಿಕೊಂಡು ಬಂದಿದೆ.

ಉಪನ್ಯಾಸಗಳು, ಗ್ರಂಥಭಂಡಾರ, ವಾಚನಾಲಯ ಮೊದಲಾದ ಕಲಾಪಗಳಲ್ಲದೆ ಈ ಸಂಸ್ಥೆಗೆ ವಿಶಿಷ್ಟವಾದ ಹಲವಾರು ಚಟುವಟಿಕೆಗಳೂ ಕಳೆದ ಅರವತ್ತು ವರ್ಷಗಳಿಂದ ಇಲ್ಲಿ ನಡೆದಿವೆ. ಸಾಪ್ತಾಹಿಕ ವ್ಯಾಸಂಗ ಗೋಷ್ಠಿ, ತಜ್ಞರಿಂದ ಸಾಮಯಿಕ ವಿಷಯಗಳ ತಲಸ್ಪರ್ಶಿ ಅಧ್ಯಯನ, ಸರ್ಕಾರಕ್ಕೆ ವರದಿ ಸಲ್ಲಿಕೆಗಳು, ನಗರದ ವಿವಿಧ ಬಡಾವಣೆಗಳ ಪೌರಜೀವನ ಸಮಸ್ಯೆಗಳ ಅಧ್ಯಯನ, ಸರ್ಕಾರದ ವಿವಿಧ ಆಯೋಗಗಳಿಗೆ ಅಧ್ಯಯನಪೂರ್ಣ ವರದಿಗಳ ಸಲ್ಲಿಕೆ, ಮತದಾರರ ಶಿಕ್ಷಣಕ್ಕಾಗಿ ಸರ್ವಪಕ್ಷಗಳ ಪ್ರಮುಖರಿಂದ ವಿಚಾರ ಮಂಡನೆ, ಪಕ್ಷಾತೀತ ದೃಷ್ಟಿಯಿಂದ ಸಾರ್ವಜನಿಕ ವಿದ್ಯಮಾನಗಳನ್ನು ವಿಶ್ಲೇಷಿಸಿದ ಪುಸ್ತಿಕೆಗಳ ಮತ್ತು ಪತ್ರಿಕೆಯ ಪ್ರಕಟನೆ - ಹೀಗೆ ವಿವಿಧ ರೀತಿಯ ಚಟುವಟಿಕೆಗಳನ್ನು ಒಂದೆಡೆ ನಡೆಸುತ್ತ ಬಂದಿರುವ ಗೋಖಲೆ ಸಂಸ್ಥೆಗೆ ಹೋಲಿಸಬಹುದಾದ ಸಂಸ್ಥೆ ಬಹುಶಃ ಬೇರಾವುದೂ ಇಲ್ಲ.

18.1.1970ರಲ್ಲಿ ಬೆಂಗಳೂರಿನ ಪುಟ್ಟಣ್ಣ ಶೆಟ್ಟಿ ಪುರಭವನದಲ್ಲಿ ನಡೆದ ಒಂದು ಭವ್ಯ ಸಾರ್ವಜನಿಕ ಸಮಾರಂಭದಲ್ಲಿ ಡಿ.ವಿ.ಜಿ.ಯವರನ್ನು ಸನ್ಮಾನಿಸಿ, ದೇಶದ ಮಹಾಜನ ತುಂಬು ಹೃದಯದಿಂದ ಕೊಟ್ಟ ಒಂದು ಲಕ್ಷ ರೂಪಾಯಿಗಳನ್ನು ಅವರಿಗೆ ಅರ್ಪಿಸಲಾಯಿತು. ನಿನ್ನೆ ಪ್ರೊಫೆಸರ್ ಎಂ. ಎಚ್. ಕೃಷ್ಣಯ್ಯನವರು ಹೇಳಿದ ಹಾಗೆ ಡಿ.ವಿ.ಜಿ. ಆ ಹಣವೆಲ್ಲವನ್ನೂ ಗೋಖಲೆ ಸಂಸ್ಥೆಗೇ ದಾನ ಮಾಡಿದರು.

## ಜೀವನ ದೃಷ್ಟಿ

ಸಮಾಜದೊಡನೆ ಪೂರ್ಣ ಸಮರಸತೆ - ಅಭಿನ್ನತೆ, ನಿರಂತರ ಅಧ್ಯಯನ - ಚಿಂತನೆ - ಪರೀಕ್ಷೆ, ವಿಸ್ತಾರವಾದ ಜೀವನಾನುಭವ - ಈ ನಾಲ್ಕಾರು ಅಂಶಗಳು ಡಿ.ವಿ.ಜಿ.ಯವರಲ್ಲಿ ಹಾಸು ಹೊಕ್ಕಾಗಿ ಹೆಣೆದುಕೊಂಡಿದ್ದರಿಂದ ಅವರ ಜೀವನ, ಸಾಹಿತ್ಯ ಎರಡೂ ದೃಢವೂ ಕಾಂತಿಯುತವೂ ಮೌಲಿಕವೂ ಆದವು. ಆರಂಭದಲ್ಲಿಯೇ ಹೇಳಿದಂತೆ, ಅವರ ವಿವಿಧ ಮುಖ ಕಾರ್ಯಗಳಲ್ಲೆಲ್ಲ ಒಂದು ಅಖಂಡತೆ ಇತ್ತು, ಪರಸ್ಪರ ಸಂಬದ್ಧತೆ ಇತ್ತು.

ವಿಚಾರ ಮಾಡಿ ನೋಡಿದರೆ, ಈ ಗೋಖಲೆ ಸಂಸ್ಥೆಯ ಕಲ್ಪನೆಯೇ ಅದ್ವಿತೀಯವಾದ್ದು. ಇಂಥ ಕಲ್ಪನೆಗಳು ಮೂಡುತ್ತಿದ್ದುದು ಡಿ.ವಿ.ಜಿ.ಯವರ ಮನಸ್ಸಿನಲ್ಲಿ ಮಾತ್ರ. ಯಾವಾವುದೋ ಕೆಲಸಗಳಿಗೆ ನಮ್ಮಲ್ಲಿ ಏರ್ಪಾಡುಗಳು ಇರುತ್ತವೆ. ವಿದ್ಯಾರ್ಥಿಗಳಿಗಾಗಿ ಹಾಸ್ಟೆಲುಗಳು ಇರುತ್ತವೆ. ರೋಗಿಗಳಿಗಾಗಿ ಆಸ್ಪತ್ರೆಗಳು ಇರುತ್ತವೆ. ವ್ಯಾಪಾರ - ವಾಣಿಜ್ಯ ಸಂಸ್ಥೆಗಳ ಪರಿಹಾರಕ್ಕಾಗಿ ಆ ವರ್ಗದವರ ಸಂಘಟನೆಗಳು ಇರುತ್ತವೆ. ಅಶಕ್ತ ಮಹಿಳೆಯರ ಕಲ್ಯಾಣಕ್ಕಾಗಿ, ಅನಾಥ ಮಕ್ಕಳ ಪೋಷಣೆಗಾಗಿ ಸಂಸ್ಥೆಗಳು ಇರುತ್ತವೆ. ಇವೆಲ್ಲ ಸಮಾಜದ ಸ್ವಾಸ್ಥ್ಯಕ್ಕಾಗಿ ತುಂಬ ಅಗತ್ಯ, ಉಪಯುಕ್ತ ಎಂಬುದು ನಿರ್ವಿವಾದ. ಆದರೆ ದೇಶದ ಮತ್ತು ಸಮಾಜದ ಸಾಮೂಹಿಕ ಸಮಸ್ಯೆಗಳ ಅಧ್ಯಯನಕ್ಕೋಸ್ಕರ, ಮತ್ತು ಪ್ರಜೆಗಳನ್ನು ಜಾಗೃತ ಸ್ಥಿತಿಯಲ್ಲಿ ಇರಿಸುವುದಕ್ಕೋಸ್ಕರ, ನಿಷ್ಪಾಕ್ಷಿಕ ವಿದ್ವಾಂಸರೂ ಸಾಮಾನ್ಯ ಪ್ರಜೆಗಳೂ ಸೇರಿ ಪರಾಮರ್ಶನೆಯಲ್ಲಿ ತೊಡಗುವುದಕ್ಕೋಸ್ಕರ ಒಂದು ಪ್ರತ್ಯೇಕ ವೇದಿಕೆ ಬೇಡವೆ?. - ಇದು ಡಿ.ವಿ.ಜಿ.ಯವರಿಗಿದ್ದ ಕಾಳಜಿ. ಇದಕ್ಕಾಗಿ ಡಿ.ವಿ.ಜಿ. ಜೀವಮಾನದುದ್ದಕ್ಕೂ ಈ ದಿಕ್ಕಿನಲ್ಲಿ ಒಂದಲ್ಲ ಒಂದು ವೇದಿಕೆಯನ್ನು ಹುಟ್ಟುಹಾಕುತ್ತಲೇ ಇದ್ದರು. ಆ ಪ್ರಯತ್ನಸರಣಿಗೆ ಶಿಖರಪ್ರಾಯವಾದ್ದು, ಡಿ.ವಿ.ಜಿ. ಸ್ಥಾಪಿಸಿದ ಈ ಗೋಖಲೆ ಸಂಸ್ಥೆ.


ಇಂಥ ಕೆಲಸಕ್ಕೆ ಬೇಕಾದ ಅನುಭವವನ್ನು ಮತ್ತು ಶ್ರಮಸಿದ್ಧತೆ ಯನ್ನು1910 -12ರ ವರ್ಷಗಳಿಂದಲೇ ಡಿ.ವಿ.ಜಿ. ರೂಢಿಸಿಕೊಂಡಿದ್ದರು. ಒಂದೆ ಮಾತಿನಲ್ಲಿ ಹೇಳಬೇಕೆಂದರೆ, ಪಕ್ಷರಾಜಕೀಯದಿಂದ ದೂರವಾದ ಜನಸಂಘಟನೆಯನ್ನು ಡಿ.ವಿ.ಜಿ. ತಮ್ಮ ಜೀವಿತ ಕಾರ್ಯವನ್ನಾಗಿ ಸ್ವೀಕರಿಸಿದ್ದರು. ಅವರಿಂದ ಪೋಷಣೆ ಪಡೆದ ಸಂಸ್ಥೆ - ಸಂಘಟನೆಗಳನ್ನು ಉದ್ದಕ್ಕೂ ಹೆಸರಿಸ ಬೇಕಾದರೂ ಬಹಳ ಸಮಯ ಹಿಡಿಯುತ್ತದೆ.

ಮೈಸೂರು ರಾಜ್ಯದಲ್ಲಿ ಪತ್ರಕರ್ತರ ಸಂಘ, ಶೀಘ್ರ ಲಿಪಿಕಾರರ ಸಂಘ ಮೊದಲಾದ ಬಗೆಬಗೆಯ ಸಂಘಟನೆಗಳಿಗೆ ಚಾಲನೆ ಕೊಟ್ಟವರು ಡಿ.ವಿ.ಜಿ. ರಾಮಾಯಣ - ಭಾರತ ಪ್ರಕಾಶನ ಕಾರ್ಯಕ್ಕೆ ಪ್ರೇರಕರಾದವರು. ಡಿ.ವಿ.ಜಿ. ಇದೀಗ ಬೆಂಗಳೂರಿನ ಡಿ.ವಿ.ಜಿ. ರಸ್ತೆಯಲ್ಲಿರುವ ಅಬಲಾಶ್ರಮ ಮೊದಲಾದ ನಾಲ್ಕಾರು ಸಂಸ್ಥೆಗಳಿಗೆ ಅವರಿಂದ ಯೋಗದಾನ ದೊರೆತಿತ್ತು.

ಡಿ.ವಿ.ಜಿ.ಯವರಲ್ಲಿ ಇದ್ದ ಬಂಡವಾಳ ಲೋಕಹಿತಾಕಾಂಕ್ಷೆಯೊಂದೇ. ತಮ್ಮ ದೈವದತ್ತ ಪ್ರತಿಭೆ, ಶಕ್ತಿ, ಸಮಯ ಎಲ್ಲವನ್ನೂ ಅವರು ಸಾರ್ವಜನಿಕ ಸೇವೆಗಾಗಿ ಸುರಿದರು.

ಭಗವಂತ ಅವರಿಗೆ ಆರ್ಥಿಕ ಸಂಪನ್ನತೆಯನ್ನು ಕೊಡಲು ಮರೆತಿದ್ದ. ಹೀಗಾಗಿ ಜೀವನ ನಿರ್ವಹಣೆ ಅವರಿಗೆ ಕಷ್ಟದಾಯಕವೇ ಆಗಿತ್ತು. ಬೇರೆ ಎಲ್ಲೆಡೆಯವರಾದರೆ ಹತಾಶರಾಗಿ ಕುಸಿಯುವಂಥ ಸನ್ನಿವೇಶದಲ್ಲಿಯೇ ಅವರು ಇಡೀ ಜೀವನ ಸವೆಸಿದರು. ಆದರೆ ಜನ ದಶಕಗಳುದ್ದಕ್ಕೂ ನೋಡಿದ್ದು ಅವರ ನಗುಮುಖವನ್ನು ಮಾತ್ರ. ಅವರ ಈ ಆತ್ಮಸಂಯಮ ತುಂಬಾ ಆಶ್ಚರ್ಯಕರವಾದ್ದು. ಇಲ್ಲಿ ನಮ್ಮ ಜೊತೆ ಇರುವ ದೊರೆಸ್ವಾಮಿ, ಡಿ.ವಿ.ಜಿ.ಯವರ ಸೋದರರಾದ ಶ್ರೀ ಡಿ.ವಿ. ಶೇಷಗಿರಿರಾಯ ಪುತ್ರರು ಅವರಿಗೆ ಗೊತ್ತಿದೆ. ಅತ್ಯಂತ ಆತ್ಮೀಯರಾದವರಲ್ಲಿಯೂ ಅವರು ಎಂದೂ ತಮ್ಮ ತಾಪತ್ರಯ ಹೇಳಿಕೊಂಡವರಲ್ಲ. ಅಷ್ಟೇಕೆ, ಅವರ ಮನೆಮಂದಿಯೊಡನೆಯೂ ಅವರು ಹೀಗೆಯೇ ವ್ಯವಹರಿಸಿದರು.

ಮನೆಯ Electricity bill ಕಟ್ಟಲು ಹಣ ಇಲ್ಲವಲ್ಲ ಎಂಬ ಆತಂಕಕ್ಕೊಳಗಾಗಿದ್ದ ಸ್ಥಿತಿಯಲ್ಲಿಯೂ ಅವರು ನನ್ನನ್ನು ಕೂಡಿಸಿಕೊಂಡು ಅಂದಿನ ನಿಯತವಾದ ಲೇಖನ ಹೇಳಿ ಬರೆಸಿದ್ದಾರೆ.



ಇದನ್ನು ಜೀವನಮಾನದುದ್ದಕ್ಕೂ ಒಂದು ಕಠಿನ ವ್ರತವಾಗಿ ಅವರು ನಡೆಸಿದರು. ಇದನ್ನು ನೆನೆಯುವಾಗ, ವೇದಾಂತವೆಂಬುದು ಡಿ.ವಿ.ಜಿ.ಯವರ ಪಾಲಿಗೆ ಬರಿಯ ಶಾಸ್ತ್ರದ ವಿಷಯವಾಗಿರಲಿಲ್ಲ. ಬರಿಯ ಬೋಧನೆಯ ವಿಷಯ ಆಗಿರಲಿಲ್ಲ, ಜೀವನ ಸೂತ್ರವೇ ಆಗಿತ್ತು ಎಂದು ಹೇಳಬೇಕು.

ಕಂಚಿಯ ಪರಮಾಚಾರ್ಯರ 80ನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ ಅವರ ಭಕ್ತರೊಬ್ಬರು ಒಂದು ದತ್ತಿಯನ್ನು ಕೊಟ್ಟು, ಅದರ ಆಶ್ರಯದಲ್ಲಿ ವರ್ಷಕ್ಕೊಂದು ಬಾರಿ ವೇದಾಂತಾನುಗುಣ ಜೀವನ ಕುರಿತು ಉಪನ್ಯಾಸಕ್ಕೆ ಏರ್ಪಾಟು ಮಾಡಿದ್ದರು. ಹಿರಿಯ ಸ್ವಾಮಿಗಳ ಸೂಚನೆಯ ಮೇರೆಗೆ ಈ ದತ್ತಿಯ ಮೊದಲನೆಯ ಉಪನ್ಯಾಸವನ್ನು ಡಿ.ವಿ.ಜಿ.ಯವರೇ ಮಾಡಬೇಕೆಂದು ಬೇಡಿಕೆ ಬಂದಿತು. ತುಂಬ ಅನಾರೋಗ್ಯದಲ್ಲಿದ್ದರೂ ಸ್ವಾಮಿಗಳ ವಿಷಯದಲ್ಲಿ ತಮಗಿದ್ದ ಭಕ್ತ್ಯಭಿಮಾನಗಳ ಕಾರಣದಿಂದ ಡಿ.ವಿ.ಜಿ. ಒಪ್ಪಿಕೊಂಡು Advaita : Faith and Practice (ಅದ್ವೈತ ತತ್ತ್ವ ಮತ್ತು ಅನುಷ್ಠಾನ) ಎಂಬ ಉಪನ್ಯಾಸವನ್ನು ಹೇಳಿ ಬರೆಯಿಸಿದರು. ಅಷ್ಟರಲ್ಲಿ ಅವರ ದೇಹಾವಸಾನವಾಯಿತು.

ಕೆಲವು ತಿಂಗಳ ನಂತರ ನಾನೂ ನನ್ನ ಮಿತ್ರರೂ ಮದರಾಸಿಗೆ ಹೋಗಿ ಅಲ್ಲಿ ಭಾರತೀಯ ವಿದ್ಯಾಭವನದಲ್ಲಿ ಏರ್ಪಡಿಸಲಾಗಿದ್ದ ಬೃಹತ್ ಸಭೆಯಲ್ಲಿ ಡಿ.ವಿ.ಜಿ.ಯವರ ಆ ಕೊನೆಯ ಉಪನ್ಯಾಸದ ವಿನಿಕೆ ಮಾಡಿದೆವು.

ವೇದಾಂತವೇ ಡಿ.ವಿ.ಜಿಯವರ ಜೀವನದ ಅಂತಃ ಶ್ರುತಿಯಾಗಿತ್ತು. 'ಆಧುನಿಕತೆ'ಯ ಒಳಿತು - ಕೆಡುಕುಗಳನ್ನು ಕುರಿತ ಡಿ.ವಿ.ಜಿಯವರ ನಿಲವು ಅವರ ಎಳೆಯ ವಯಸ್ಸಿನಲ್ಲಿಯೇ ಹರಳುಗಟ್ಟಿತ್ತೆನ್ನಬಹುದು. ವರ್ಷಗಳು ಕಳೆದಂತೆ ಅದು ಇನ್ನಷ್ಟು ದೃಢವಾಗುತ್ತ ಹೋಯಿತು. ವಾರ್ಧಕ್ಯದಲ್ಲಿ ಆಡಿದಂತೆ ತೋರುವ ಕೆಳಗಿನ ಮಾತುಗಳನ್ನು ಅವರು ಬರೆದದ್ದು 1911ರಷ್ಟು ಹಿಂದೆ :

''God save us from servile and apish imitation of the westerners. God help us to assimilate the practical and rationalistic spirit of the West and avoid the extreme individualism, the extreme socialism and the other ugly offsprings of its rank materialism.''

***

ಡಿ.ವಿ.ಜಿ.ಯವರ ವ್ಯಕ್ತಿ ವೈಶಿಷ್ಟ್ಯಗಳಲ್ಲಿ ಕೆಲವನ್ನು ನಾವು ನೆನಪು ಮಾಡಿಕೊಳ್ಳೋಣ.

ಒಬ್ಬ ಮಗಳ ಮದುವೆ ನಿಶ್ಚಿತವಾದಾಗ ಡಿ.ವಿ.ಜಿ. ಪೂರ್ತಿ ಬರಿಗೈಯಾಗಿದ್ದರು. ಹೇಗೆ ನಿರ್ವಾಹ ಮಾಡಬೇಕೆಂದು ಒಬ್ಬಿಬ್ಬ ಆಪ್ತರೊಡನೆ ವಿಚಾರ ಮಾಡುತ್ತಿದ್ದರು. ಮಿತ್ರರೊಬ್ಬರು ಆಗ ಒಂದು ಸಲಹೆ ಮಾಡಿದರು.

ಲೆಜಿಸ್ಲೇಟಿವ್ ಕೌನ್ಸಿಲಿನ್ sitting fees ಸಮಿತಿಗಳ ಸಾವಿರಾರು ರೂಪಾಯಿ ನಿಮಗೆ ಸಲ್ಲುವುದಿತ್ತು. ನೀವು ವರ್ಷಗಳುದ್ದಕ್ಕೂ ಅದು ಬೇಡವೆಂದು ನಿರಾಕರಿಸಿ Claim ಮಾಡದೆ ಸುಮ್ಮನೆ ಇದ್ದುಬಿಟ್ಟಿರಿ. ಈಗಲಾದರೂ ಅದಕ್ಕೆ ಜೀವ ಕೊಡಲಾಗುತ್ತದೇನೊ ಪ್ರಯತ್ನ ಮಾಡೋಣ. ಬಂದರೆ ಬರಲಿ''.

- ಹೀಗೆ ಬಲವಂತವಾಗಿ ಡಿ.ವಿ.ಜಿ.ಯವರಿಂದ ಅರ್ಜಿಗೆ ಸಹಿ ಮಾಡಿಕೊಂಡು ಸರ್ಕಾರಕ್ಕೆ ಸಲ್ಲಿಸಿದರು. ಆಗ ಸರ್ಕಾರದಲ್ಲಿದ್ದ ಅಧಿಕಾರಿಗಳು ದೊಡ್ಡಮನುಷ್ಯರು, ಸಹೃದಯರು. ಅವರು ಕೂಡಲೇ ಡಿ.ವಿ.ಜಿ.ಯವರ ಪರವಾಗಿ ಕ್ರಮ ಕೈಗೊಂಡು ಡಿ.ವಿ.ಜಿ.ಯವರಿಗೆ ಆ ಹಣ ಬರುವಂತೆ ಮಾಡಿದರು.

ಮದುವೆ ಸಾಂಗವಾಗಿ ನಡೆಯಿತು.

## ಸನ್ಮಾನಗಳು

ತಮಗೆ ಜನತೆಯೂ ಸರ್ಕಾರವೂ ನೀಡಬಂದ ಸನ್ಮಾನಗಳನ್ನು ವರ್ಷಗಳುದ್ದಕ್ಕೂ ನಿರಾಕರಿಸುತ್ತ ಬಂದಿದ್ದವರು, ಡಿ.ವಿ.ಜಿ. ಸರ್ಕಾರ ಕೊಡಬಯಸಿದ್ದ ಮಾಸಿಕ ವೇತನವನ್ನು ಒಂದು ಕ್ಷಣವೂ ಹಿಂದೆಗೆಯದೆ ತಿರಸ್ಕರಿಸಿದರು.

ಡಿ.ವಿ.ಜಿ.ಯವರ ಸ್ವಭಾವಕ್ಕೆ ಅನುಕೂಲಿಸೀತೆಂದು ವಿಶ್ವೇಶ್ವರಯ್ಯನವರಿಗನಿಸಿದ ಒಂದು ಉದ್ಯೋಗಾವಕಾಶ ಬಂದಿತ್ತು. ಲಾಹೋರಿನ 'ಟ್ರಿಬ್ಯೂನ್' ಪತ್ರಿಕೆಯ ಸಂಪಾದಕತ್ವ. ಪತ್ರಿಕೆಯ ವ್ಯವಸ್ಥಾಪಕರು ಸಂಪಾದಕರೊಬ್ಬರನ್ನು ಸೂಚಿಸುವಂತೆ ವಿಶ್ವೇಶ್ವರಯ್ಯನವರನ್ನು ಕೋರಿದರು. ವಿಶ್ವೇಶ್ವರಯ್ಯನವರಿಗೆ ಹೊಳೆದ ಮೊದಲ ಹೆಸರು ಡಿ.ವಿ.ಜಿ.ಯವರದು. ಅವರು ತಮ್ಮ ಸೂಚನೆಯನ್ನು ಕಳಿಸಿಕೊಟ್ಟಾಗ ಪತ್ರಿಕೆಯ ಮಾಲಿಕವರ್ಗದವರು ತುಂಬ ಸಂತೋಷಪಟ್ಟರು. ಏಕೆಂದರೆ ಆ ವೇಳೆಗೇ ಡಿ.ವಿ.ಜಿ. ಲಬ್ಧಪ್ರತಿಷ್ಠರಾಗಿದ್ದರು. ದೇಶಾದ್ಯಂತ ಖ್ಯಾತಿಗಳಿಸಿದ್ದ ಆ ಪತ್ರಿಕೆಯ ಸಂಪಾದಕತ್ವ ಎಂಥವರ ಆಸೆಯನ್ನಾದರೂ ಕೆರಳಿಸಬಹುದಾಗಿದ್ದದ್ದು. ಆದರೆ ಡಿ.ವಿ.ಜಿ.ಯವರು ತಾವು ಹಿಡಿದ ಮಂತ್ರವನ್ನು ಬಿಡಲಿಲ್ಲ. ''ನಾನು ಹೇಗೋ ಹೊಟ್ಟೆ ಹೊರೆದುಕೊಳ್ಳುತ್ತೇನೆ. ಬೀದಿಯಲ್ಲಿ ಬಿದ್ದು ಒದ್ದಾಡಿ ತೊಂಡು ತೊಂಡಾಗಿ ಬೆಳೆದ ಈ ಜೀವಕ್ಕೆ ಅಂಥ ದೊಡ್ಡ ಪದವಿ ಪ್ರತಿಷ್ಠೆಗಳು ಒಗ್ಗುವುದಿಲ್ಲ.''

ಹೀಗೆ ಸ್ವಾತಂತ್ರ್ಯ ಪ್ರೀತಿ ಡಿ.ವಿ.ಜಿ.ಯವರ ಜಾಯಮಾನ. ಆದ್ದರಿಂದ ಅವರ ರಾಜಕೀಯ ಟೀಕೆಗಳು ನಿಷ್ಪಾಕ್ಷಿಕವೂ ನಿಶಿತವೂ ಆಗಿರುವುದು ಸಾಧ್ಯವಾಯಿತು. ರೆಸಿಡೆಂಟರುಗಳು, ದಿವಾನರುಗಳೂ ಇವರ ಪ್ರಹಾರಗಳಿಗೆ ಹೊರತಾಗಲಿಲ್ಲ.

ಮೈಸೂರು ಆಸ್ಥಾನದವರು ಡಿ.ವಿ.ಜಿ.ಯವರಿಗೆ 'ರಾಜಸೇವಾಸಕ್ತ' ಬಿರುದನ್ನು ನೀಡಲು ಬಯಸಿದ್ದರು. ಡಿ.ವಿ.ಜಿ. ಅದನ್ನೂ ವಿನಯಪೂರ್ವಕವಾಗಿ ನಿರಾಕರಿಸಿದರು.

ಹೀಗೆ ನಿರಾಕರಿಸಿ ಕೆಲವರ ಆಕ್ಷೇಪಣೆಗೂ ಗುರಿಯಾದರು ! ''ನೀವು ಇದನ್ನು ನಿರಾಕರಿಸಿ ನಮಗೆಲ್ಲ ಆ ಅವಕಾಶವನ್ನು ತಪ್ಪಿಸಿಬಿಟ್ಟಿರಿ. ಇವತ್ತು ನಿಮಗೆ ಬಂದ ಆ ಬಿರುದು ಮುಂದೆ ನಮಗೂ ಬರುವ ಅವಕಾಶವಾಗುತ್ತಿತ್ತು. ಇದನ್ನು ತಪ್ಪಿಸಿಬಿಟ್ಟಿರಿ'' - ಎಂದು ಕೋಪ ಮಾಡಿಕೊಂಡರು.

ಆದರೆ ಡಿ.ವಿ.ಜಿ.ಯವರಿಗೆ ಅದರಲ್ಲಿ ಎಷ್ಟು ಮಾತ್ರವೂ ಆಸಕ್ತಿ ಇರಲಿಲ್ಲ.

ಇಳಿ ವಯಸ್ಸಿನಲ್ಲಿ ಒಂದೆರಡು ಸನ್ಮಾನಗಳನ್ನು ಅವರು ಸ್ವೀಕರಿಸಲೊಪ್ಪಿದುದು ಮಿತ್ರರ, ಹಿತೈಷಿಗಳ ಒತ್ತಾಯದಿಂದ ಮಾತ್ರ. 1961ರಲ್ಲಿ ಡಿ.ವಿ.ಜಿ. ಯವರಿಗೂ ಜಾನ್ ಕೆನ್ನೆತ್ ಗಾಲ್‌ಬ್ರೇತ್ ಅವರಿಗೂ ಗೌರವಾರ್ಥ ಡಾಕ್ಟೊರೇಟ್ ನೀಡಲು ಮೈಸೂರು ವಿಶ್ವವಿದ್ಯಾಲಯ ನಿರ್ಣಯಿಸಿತು. ಇದಕ್ಕೆ ಡಿ.ವಿ.ಜಿ. ಯವರನ್ನು ಒಪ್ಪಿಸಲು ಆಗಿನ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ|| ಎನ್. ಎ. ನಿಕಂ ಅವರು ಭಾರೀ ಪ್ರಯತ್ನವನ್ನೇ ಮಾಡಬೇಕಾಯಿತು.

ಹಿಂದೊಮ್ಮೆ ನಿರಾಕರಿಸಿದ್ದರೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು 'ಶ್ರೀಮದ್ಭಗವದ್ಗೀತಾ ತಾತ್ಪರ್ಯ' ಗ್ರಂಥಕ್ಕಾಗಿ ಡಿ.ವಿ.ಜಿ. ಸ್ವೀಕರಿಸಲೊಪ್ಪಿದರು. ಆ ಹಣವನ್ನೂ ಗೋಖಲೆ ಸಂಸ್ಥೆಗೆ ದಾನ ಮಾಡಿದರು.

'ಪದ್ಮಭೂಷಣ' ಪ್ರಶಸ್ತಿಯೂ ಇದೇ ಕಥೆ. ಡಿ.ವಿ.ಜಿ.ಯವರಿಗೆ ಅದರಲ್ಲಿ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ಈ ಸಲವೂ (1974) ನಿಕಟವರ್ತಿಗಳ ಒತ್ತಡಕ್ಕೆ ಡಿ.ವಿ.ಜಿ. ಮಣಿದರು.

ಅವರಿದ್ದ ಮನೆಯ ರಸ್ತೆಗೆ ಅವರ ಹೆಸರನ್ನಿಡುವ ನಗರಸಭೆಯ ನಿರ್ಧಾರವನ್ನೂ ಅವರು ವಿರೋಧಿಸಿದ್ದರು.

ಸಮಾಜದಲ್ಲಿ ಕೆಲವರು ಪಂಡಿತರು ನೋಡಲು ಸಿಗಬಹುದು. ಕವಿಗಳು ಒಂದಷ್ಟು ಜನ ಇರಬಹುದು. ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯರಾಗಿರುವವರು ಕೆಲವರು ದೊರೆಯಬಹುದು. ಯಾವುದೋ ಒಂದು ಸೇವಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡವರೂ ವಿರಳವಾಗಿ ಕಣ್ಣಿಗೆ ಬೀಳಬಹುದು. ಆದರೆ ಈ ಅಷ್ಟೂ

MH/MR/ME/093/06-08
Date of Posting : 10-05-2006

ಕ್ಷೇತ್ರಗಳಲ್ಲಿ ಆಳವಾಗಿ ಹೊಕ್ಕು ಈ ಒಂದೊಂದರಲ್ಲಿಯೂ ಅಸಾಧರಣ ಸಾಧನೆ ಮಾಡಿದವರು. ಡಿ.ವಿ.ಜಿ. ಇಂಥ ಬಹುಮುಖಿ ವ್ಯಕ್ತಿತ್ವ ಮೆರೆದ ಇನ್ನೊಬ್ಬರ ಉದಾಹರಣೆ ದುರ್ಲಭ ಎಂದೇ ಹೇಳಬೇಕಾಗಿದೆ.

ಅಮೆರಿಕದ ಕವಿ ರಾಬರ್ಟ್ ಫ್ರಾಸ್ಟ್ ಒಂದು ಕಡೆ ಹೇಳಿದ -

''The world is full of willing people : some
willing to work, the rest willing to let them.''

ನಮ್ಮಲ್ಲಿ ಹೆಚ್ಚಿನವರು ಈ ಎರಡನೇ ವರ್ಗಕ್ಕೆ ಸೇರಿದವರು. ಡಿ.ವಿ.ಜಿ. ಮೊದಲನೇ ವರ್ಗಕ್ಕೆ ಸೇರಿದವರು.

''They say hard work never hurt anybody,
but I figure, why take the chance?''

- ಅಂತ ಅಮೆರಿಕದ ಹಿಂದಿನ ಅಧ್ಯಕ್ಷ ರಾನಲ್ಡ್ ರೀಗನ್ ಹೇಳುತ್ತಿದ್ದ.

ಇಂಗ್ಲೆಂಡಿನಲ್ಲಿ Lord Mancroft ಅಂತ ಒಬ್ಬ ರಾಜಕಾರಣಿ ಇದ್ದ. ಅವನು ಹೇಳುತ್ತಿದ್ದ -

Happy is the man with a wife to tell him
what to do, and a secretary to do it.''

ಅಗಾಧ ಶ್ರಮಪಟ್ಟು ಕೆಲಸ ಮಾಡುವುದರಲ್ಲಿ ಒಂದು ಅನುಕೂಲ ಇದೆ. ಇದರಲ್ಲಿ ಯಾರೂ ಸ್ಪರ್ಧಿಗಳು ಇರುವುದಿಲ್ಲ ! Elbert Hubbard ಎಂಬ ಅಮೆರಿಕನ್ ಲೇಖಕನದು ಒಂದು ಮಾತು ಇದೆ:

''Do your work with your whole heart, and you will succeed: there is so little competition !''

ಹಾಗೆ ಬೇರೆಯವರ ಸ್ಪರ್ಧೆಯೇ ಇಲ್ಲದ ಸಾರ್ವಜನಿಕ ಕಾರ್ಯದ ಕ್ಷೇತ್ರವನ್ನು ಡಿ.ವಿ.ಜಿ. ಆಯ್ದುಕೊಂಡು ಜೀವಮಾನವೆಲ್ಲ ನಡೆಸಿದರು.

ಡಿ.ವಿ.ಜಿ. ನಿಧನರಾದ ಸಂದರ್ಭದಲ್ಲಿ (1975) ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಉದ್ಗರಿಸಿದ್ದರು:

''ಡಿ.ವಿ.ಜಿ. ಇಲ್ಲದ ಬೆಂಗಳೂರನ್ನು ಊಹಿಸುವುದೂ ಕಷ್ಟ. ಅವರ ಗುಣಗಳನ್ನೂ ಆದರ್ಶಗಳನ್ನೂ ನಮ್ಮ ಕೈಲಾದಷ್ಟು ಅನುಸರಿಸಿ, ಅವರಿಗೆ ಪ್ರಿಯವಾಗಿದ್ದ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನೂ ಅದರ ಚಟುವಟಿಕೆಗಳನ್ನೂ ಬಲಪಡಿಸುವುದೇ ನಾವು ಆ ನಮ್ಮ ಹಿರಿಯ ಹಿತೈಷಿಗೆ ಸಲ್ಲಿಸಬಹುದಾದ ಕಾಣಿಕೆ.''

•

## ಈ ಟೀವಿಯ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲಿ ಡೊಂಬಿವಲಿಯ ಕುಮಾರಿ ಸುಶೀಲಾ ರಾವ್



ಕಳೆದ ಒಂದು ವರ್ಷದಿಂದಲೂ ಕೆನರಾ ಬ್ಯಾಂಕ್‌ನವರು ತಮ್ಮ 100ನೇ ವರ್ಷದ ಸಲುವಾಗಿ ಈ ಟೀವಿ ಕನ್ನಡದಲ್ಲಿ "ಎದೆ ತುಂಬಿ ಹಾಡುವೆನು" ಕಾರ್ಯಕ್ರಮವನ್ನು ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ನಿರ್ದೇಶನದಲ್ಲಿ ಸಾದರ ಪಡಿಸುತ್ತಿದೆ.

ಉದಯೋನ್ಮುಖಿ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರಸಾರ ಮಾಡುತ್ತಿರುವ ಈ ಕಾರ್ಯಕ್ರಮದಲ್ಲಿ ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯದ ವಿದ್ಯಾರ್ಥಿನಿ ಕುಮಾರಿ ಸುಶೀಲಾ ರಾವ್ ಸ್ಪರ್ಧೆಯಲ್ಲಿ ಭಾಗವಹಿಸಿ ತೇರ್ಗಡೆಯಾಗಿರುತ್ತಾರೆ. ಮೊದಲನೇ ಹಂತದ ಸ್ಪರ್ಧೆಯಲ್ಲಿ ವಿಜೇತರಾಗಿ 2ನೇ ಹಂತಕ್ಕೂ ಅರ್ಹರಾಗಿರುತ್ತಾರೆ.

ಮೊದಲನೇ ಹಂತದ ಗಾಯನ ದಿನಾಂಕ 14-5-2006ರಂದು ಭಾನುವಾರ ರಾತ್ರಿ 9.00 ಗಂಟೆಗೆ ಪ್ರಸಾರವಾಗಲಿದೆ.

ಕುಮಾರಿ ಸುಶೀಲಾ ರಾವ್ ವ್ಯಾಸಂಗದಲ್ಲಿ ವೈದ್ಯಕೀಯ ಪದವಿಗೆ ತಯಾರಿ ನಡೆಸುತ್ತಿದ್ದಾರೆ. ಸಂಗೀತದಲ್ಲಿ ಮೈಸೂರು ಸಂಗೀತ ವಿದ್ಯಾಲಯದ ತರಬೇತಿಯಲ್ಲಿ ಕರ್ನಾಟಕ ಸರಕಾರದ ಸೀನಿಯರ್ ದರ್ಜೆಯನ್ನು ಮುಗಿಸಿ ವಿದ್ವತ್ ಪರೀಕ್ಷೆಗೆ ತಯಾರಿ ತೆಗೆದುಕೊಳ್ಳುತ್ತಿದ್ದಾರೆ. ಬೆಂಗಳೂರು, ಮಂಗಳೂರು ಹಾಗೂ ಮುಂಬಯಿಯಲ್ಲಿ ಅನೇಕ ಕಡೆ ಸ್ವತಂತ್ರವಾಗಿ ಸಂಗೀತ ಕಚೇರಿ ಮಾಡಿದ್ದಾರೆ.

ಕಲಾಭಿಮಾನಿಗಳು ಪ್ರಸಾರವನ್ನು ವೀಕ್ಷಿಸಿ ಈ ಯುವ ಪ್ರತಿಭೆಯನ್ನು ಪ್ರೋತ್ಸಾಹಿಸಬೇಕೆಂದು ವಿದ್ಯಾಲಯದ ವ್ಯವಸ್ಥಾಪಕರು ಕೋರಿರುತ್ತಾರೆ.

## ಚಿತ್ರರಂಗದ ಧ್ರುವತಾರೆ



ಡಾ. ರಾಜ್‌ಕುಮಾರ್ ಎಂದಾಕ್ಷಣ ಕಣ್ಣೆದುರು ಬರುವುದು ಅವರೊಬ್ಬ ಅದ್ಭುತ ನಟ, ಕಲಾವಿದ. ನಟನೆಯಿಂದಲೆ ಜನಪ್ರಿಯತೆಯ ತುತ್ತತುದಿಯನ್ನು ಏರಿದವರು. ಭಾರತೀಯ ಚಿತ್ರರಂಗದಲ್ಲಿಯೇ ನಾವು ಅವರನ್ನೊಬ್ಬ ವಿಶಿಷ್ಟ ಕಲಾವಿದ ಅಂತ ಗುರುತಿಸಬಹುದು. ಯಾಕೆಂದರೆ ಕೇವಲ ನಟನಾಗಿರದೆ ಉತ್ತಮ ಗಾಯಕರೂ ಆಗಿದ್ದರು. ಅಷ್ಟೇ ಅವರ ಸಂಭಾಷಣಾ ಚಾತುರ್ಯ. ಎಲ್ಲದಕ್ಕೂ ಮೇಲಾಗಿ ಅವರೊಬ್ಬ ಉತ್ತಮ ವ್ಯಕ್ತಿ. ಸರಳ ಸಜ್ಜನಿಕೆಯ ಪ್ರತೀಕ. ಎದುರಿನ ವ್ಯಕ್ತಿ ಎಂಥವನೇ ಆಗಿರಲಿ ಅಪಾರ ಗೌರವದಿಂದ ನೋಡುವ ಮಾತನಾಡುವ ವ್ಯಕ್ತಿತ್ವ ಅವರದು. ಈ ಕಾರಣದಿಂದಲೋ ಏನೋ ಅಪಾರ ಅಭಿಮಾನಿಗಳನ್ನು ಹೊಂದಿದ್ದರು. ಅಭಿಮಾನಿಗಳಿಗೆ ಅವರು ದೇವರೇ ಆಗಿ ಬಿಟ್ಟಿದ್ದರು.

ಕನ್ನಡ ಚಿತ್ರರಂಗದಲ್ಲಿ ಅನೇಕ ಹೊಸ ಕಲಾವಿದರನ್ನು ಪ್ರೋತ್ಸಾಹಿಸಿ ಅವರಿಗೆ ದಾರಿದೀಪವಾಗಿದ್ದರು. ಬಹುಶಃ ಕನ್ನಡ ಚಿತ್ರರಂಗ ಮತ್ತೊಬ್ಬ ರಾಜಕುಮಾರನನ್ನು ನೋಡುವುದು ಕಷ್ಟವೆ ಅನಿಸುತ್ತದೆ. ಇವತ್ತು ನಮ್ಮೊಂದಿಗಿಲ್ಲದಿದ್ದರೂ ಅಪಾರ ಅಭಿಮಾನಿಗಳ ಹೃದಯದಲ್ಲಿ ನೆಲೆ ನಿಂತಿದ್ದಾರೆ. ಎಂದೆಂದಿಗೂ ನೆಲೆ ನಿಲ್ಲುವ ವ್ಯಕ್ತಿತ್ವ ಅವರದು. ಕಲಾವಿದನಾಗಿ ಅವರನ್ನು ವಿಶ್ಲೇಷಿಸುವುದು ನಮ್ಮಂಥವರಿಗೆ ತುಂಬ ಕಷ್ಟದ ಕೆಲಸ. ಯಾಕೆಂದರೆ ಅವರು ಏರಿದ ಎತ್ತರ ನಮ್ಮಿಂದ ನೋಡಲೂ ಕಷ್ಟ. ಇಂಥ ಮಹಾನ್ ಕಲಾವಿದನ ಬಗ್ಗೆ ಬರೆಯುವುದೇ ಒಂದು ಸಂತೋಷದ ಸಂಗತಿ. ಲೇಖನದ ಮೂಲಕ ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ.

ಬೇಡರ ಕಣ್ಣಪ್ಪನಾಗಿ ಬಂದು ರಣಧೀರ ಕಂಠೀರವನಾಗಿ, ಬಂಗಾರದ ಮನುಷ್ಯನಾಗಿ, ದೇವತಾ ಮನುಷ್ಯನಾಗಿ ಧ್ರುವತಾರೆಯಾದರು. ಭಾರತೀಯ ಚಿತ್ರರಂಗದಲ್ಲಿ ಅವರ ಹೆಸರು ಅಜರಾಮರವಾಗಿರಲಿ ಎಂದು ಆಶಿಸುತ್ತಾ ಅಗಲಿದ ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲೆಂದು ನಮ್ಮೆಲ್ಲರ, ನೇಸರುವಿನ ಹಾರೈಕೆ.

- *S.B.N.*

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938